Mr. SPEAKER.—Sri Srinivasa Iyengar's point is that Government are getting more than Rs.40,000 a year and are spending only Rs. 10,000 a year.

Sri KADIDAL MANJAPPA.—We cannot take that aspect in regard to that road. Every road has got a claim on the Government.

Sri S. SRINIVASA IYENGAR.—But many roads are not paying, Sir.

Mr. SPEAKER.—His another point was that Government have been realising Rs. 75,000 every year from vehicle tax, petrol cess, etc., and he wants to know what is the amount that is allotted in the Budget under communications. You can give that information to satisfy the Member. You can give him the figures for the last five years.

Sri KADIDAL MANJAPPA.—I have not got the figures available now. I can only submit that we will try to asphalt this road in the course of two or three years.

Sri S. SRINIVASA IYENGAR.—I seek leave to withdraw my cut motion.

The cut motion was, by leave, withdrawn.

Mr. SPEAKER.—The next cut motion, No. 24 is for raising a discussion on the construction of a bridge which is not under this Demand. Sri Rachaiah can move the next cut motion, No. 25 which is also under his name.

Condition of the road between Chamarajanagar and Yelandur.

ಶ್ರೀ ಬಿ. ರಾಚಯ್ಯ (ಯಳಂದೂರು—ಅನುಸೂಚಿತ ಜಾತಿಗಳು).—ಈ ಖೋತಾ ಸೂಚನೆಯನ್ನು ಮಂಡಿಸುತ್ತೇನೆ :

"50. ಸಿವಿಲ್ ಕಾಮಗಾರಿಗಳು ಎಂಬ ಬಾಬಿನಲ್ಲಿ ಕೋರಿರತಕ್ಕ 15,20,500 ರೂಪಾಯಿಗಳ ಡಿಮ್ಯಾಂಡ್ ಮನವಿಯ ಸಂದರ್ಭದಲ್ಲಿ 100 ರೂಪಾಯಿಗಳನ್ನು ಕಡಮೆ ಮಾಡಬೇಕು. (ಚಾಮರಾಜನಗರ ಮತ್ತು ಯಳಂದೂರು ತಾಲ್ಲೂಕುಗಳಲ್ಲಿ ರಸ್ತೆಗಳು ಬಹಳ ಹೀನಸ್ಥಿತಿಯಲ್ಲಿರುವುದರ ವಿಷಯದಲ್ಲಿ ಚರ್ಚೆ ನಡೆಯುವಂತೆ ಮಾಡುವುದಕ್ಕಾಗಿ.)"

ಸ್ವಾಮಿ, ಚಾಮರಾಜನಗರ ಮತ್ತು ಯಳಂದೂರು ತಾಲ್ಲೂಕುಗಳಲ್ಲಿ ವಿಶೇಷ ಮಳೆ ಬಂದುದರಿಂದಲೂ ಮತ್ತು ವಾಹನಗಳ ಸಂಚಾರ ಹೆಚ್ಚಾಗಿರುವುದರಿಂದಲೂ ಅಲ್ಲಿರತಕ್ಕ ರಸ್ತೆಗಳ್, ಎಂದರೆ, ಚಾಮರಾಜನಗರದಿಂದ ಟಿ.-ನರಸೀಪುರದ ಮಾರ್ಗವಾಗಿ ಬರುವ ರಸ್ತೆ, ಚಾಮರಾಜನಗರ-ಸತ್ಯಮಂಗಲ ರಸ್ತೆ, ಯಳಂದೂರು ಮಾರ್ಗವಾಗಿ ಸಂತೇಮರಳ್ಳಿಯಿಂದ ಕೊಳ್ಳೇಗಾಲಕ್ಕೆ ಹೋಗುವ ರಸ್ತೆ-ಇವುಗಳು ಮತ್ತು ಡಿಸ್ಟ್ರಿಕ್ಟ್ ಬೋರ್ಡಿನವರ ಆಡಳಿತದಲ್ಲಿರುವ ರಸ್ತೆಗಳು ಬಹಳ ಹೀನಸ್ಥಿತಿಯಲ್ಲಿವೆ. ಅದರಲ್ಲಿಯೂ ಡಿಸ್ಟ್ರಿಕ್ಟ್ ಬೋರ್ಡಿನಿಂದ ಮೇಂಟೇನ್ ಮಾಡುತ್ತಿರುವ ರಸ್ತೆಗಳು ಬಹಳ ಹೀನಸ್ಥಿತಿಯಲ್ಲಿವೆ. ಅಲ್ಲಿ ಜಿಲ್ಲಾ ಬೋರ್ಡ್ ರಸ್ತೆ ಎಂಬ ಬೋರ್ಡನ್ನು ಮಾತ್ರ ನೋಡುತ್ತೇವೆ, ಅಲ್ಲಿ ರಸ್ತೆಗಳಿವೆಯೋ ಇಲ್ಲವೋ ಎಂಬ ಅನುಮಾನ ಬರುತ್ತದೆ. ಪಬ್ಲಿಕ್ ವರ್ಕ್ಸ್ ಇಲಾಖೆಯವರನ್ನು ಕೇಳಿದರೆ, ಈಗ ಕೆಲವು ರಸ್ತೆಗಳನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ ಕೊಡುತ್ತಿದ್ದೇವೆ, ಆದ್ದರಿಂದ ಮಾಡಿಸಿಲ್ಲವೆಂದು ಹೇಳುತ್ತಾರೆ; ಡಿಸ್ಟ್ರಿಕ್ಟ್ ಬೋರ್ಡಿನವರನ್ನು ಕೇಳಿದರೆ, ಕೆಲವು ರಸ್ತೆಗಳನ್ನು ಸರ್ಕಾರಕ್ಕೆ ವಹಿಸುತ್ತಿ

ರುವುದರಿಂದ ಯಾವ ರಸ್ತೆಗಳ ಕೆಲಸವನ್ನು ತೆಗೆದು ಕೊಳ್ಳುವುದೂ ಕಷ್ಟವಾಗಿದೆ ಎಂದು ಹೇಳುತ್ತಿದ್ದಾರೆ. ಈ ಮಧ್ಯದಲ್ಲಿ ಯಾವ ಕೆಲಸವೂ ನಡೆಯುತ್ತಿಲ್ಲ. ಈ ಸ್ಥಳಗಳು ಕಪ್ಪು ಮಣ್ಣಿನಿಂದ ಕೂಡಿರುವುದರಿಂದ ಇಲ್ಲಿ ಹೆಚ್ಚಾಗಿ ಮಳೆಗಾಲದಲ್ಲಿ ರಸ್ತೆಗಳು ಕೆಸರಿನಿಂದ ಕೂಡಿರುತ್ತವೆ. ಇದರಿಂದ ಜನರ ಮತ್ತು ವಾಹನಗಳ ಸಂಚಾರಕ್ಕೆ ಬಹಳ ಕಷ್ಟವಾಗಿದೆ. ಯಳಂದೂರಿನಿಂದ ಬಿಳಿಗಿರಿರಂಗನ ಬೆಟ್ಟಕ್ಕೆ ಒಂದು ರಸ್ತೆಯನ್ನು ಮಾಡಿಸಬೇಕೆಂದು ಈಗಾಗಲೇ ಅಂದಾಜು ತಯಾರಾಗಿ ಸರ್ಕಾರದ ಅವಗಾಹನೆಗೆ ಬಂದಿದೆ. ಆದರೂ ಕೂಡ ನಾಲ್ಕೈದು ವರ್ಷಗಳಿಂದಲೂ ಇದನ್ನು ಮಾಡಿಸುತ್ತೇವೆಂದು ಹೇಳುತ್ತಿದ್ದಾರೆಯೇ ವಿನಾ ಈ ಪ್ರದೇಶದಲ್ಲಿ ಯಾವ ಹೊಸ ರಸ್ತೆಯನ್ನೂ ಮಾಡುತ್ತಿಲ್ಲ.

ಎರಡನೆಯದಾಗಿ, ದೊಡ್ಡರಾಯಿಪೇಟೆಯಿಂದ ಕಡ್ಲೂರು, ಆಲೂರಿನಿಂದ ಕಾಗಲವಾಡಿಗೆ ಜಿಲ್ಲಾ ಬೋರ್ಡ್ ರಸ್ತೆ ಮಾಡಿದ್ದಾರೆ. ಆ ರಸ್ತೆಯಲ್ಲಿ ಒಂದು ಸೇತುವೆಯನ್ನು ಕಟ್ಟಬೇಕೆಂದು ಒಂದು ಅಂದಾಜು ತಯಾರಾಗಿತ್ತು. ಕಳೆದ ಅಕ್ಟೋಬರ್ ಅಧಿವೇಶನದಲ್ಲಿ ಮಾನ್ಯ ಮಂತ್ರಿಗಳು, ಕೂಡಲೇ ಈ ಸೇತುವೆಯ ಕೆಲಸವನ್ನು ತೆಗೆದುಕೊಳ್ಳಲು ಸೂಪರಿಂಟೆಂಡಿಂಗ್ ಇಂಜನಿಯರಿಗೆ ಬರೆಯುವುದಾಗಿ ಹೇಳಿ 116ನೆಯ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದರು. ಆದರೂ ಕೂಡ ಇದುವರೆಗೂ ಆ ಸಂಬಂಧವಾಗಿ ಯಾವ ಕೆಲಸ ಕಾರ್ಯಗಳೂ ನಡೆದಿಲ್ಲದೇಯಿರುವುದನ್ನು ನೋಡಿದರೆ ಬಹಳ ವಿಷಾದವಾಗುತ್ತದೆ. ಮೈಸೂರು ಜಿಲ್ಲೆಯಲ್ಲಿ ಈಗಾಗಲೇ ಆರು ಸೇತುವೆಗಳಾಗಿವೆ, ಆದುದರಿಂದ ಸುವರ್ಣಾವತಿಗೆ ಸೇತುವೆಯನ್ನು ಕಟ್ಟಿದರೆ ಖರ್ಚು ಹೆಚ್ಚಾಗುತ್ತದೆಂದು ಸೂಪರಿಂಟೆಂಡಿಂಗ್ ಇಂಜಿನಿಯರು ಬಂದಿದ್ದಾರೆಂದು ತಿಳಿದು ಬಂದಿದೆ. ಸುವರ್ಣಾವತಿನದಿ ಹರಿಯುವುದು ಮೈಸೂರು ದೇಶದಲ್ಲಿ. ಯಳಂದೂರು ಚಾಮರಾಜನಗರ ತಾಲ್ಲೂಕುಗಳಲ್ಲಿ ನದಿಯ ಎರಡು ಕಡೆ ಇರುವ ಹಳ್ಳಿಗಾಡಿನ ಜನರು ಸಂಚಾರಮಾಡಬೇಕಾದರೆ ಚಂದಕವಾಡಿ ಸೇತುವೆಯನ್ನು ಸುತ್ತಿಕೊಂಡು ಬರಬೇಕಾಗಿದೆ. ಮೂವತ್ತು ಮೈಲಿ ದೂರ ಹೆಚ್ಚಾಗಿ ಸುತ್ತಿಕೊಂಡು ಬರಬೇಕಾಗಿದೆ. ಇದರಿಂದ ಬಹಳ ಕಷ್ಟವಾಗಿದೆ.

ಐ. ವಿ. ಸಿ. ರಸ್ತೆಗಳಿಗೆ ಹೆಚ್ಚು ಹಣವನ್ನೊದಗಿಸಬೇಕೆಂದು ಆಗಾಗ ಕೇಳುತ್ತಿದ್ದೇವೆ. ನಮ್ಮ ಪ್ರದೇಶದಿಂದ ಬರುತ್ತಿರುವ ಇತರರೂ ಕೇಳುತ್ತಿದ್ದಾರೆ. ಆದರೂ ಏನೂ ಮಾಡಿಲ್ಲ. ಆ ಪ್ರದೇಶದಿಂದ ಕಾಂಗ್ರೆಸ್ ಸದಸ್ಯರು ಬಂದಿಲ್ಲವೆಂತಲೋ ಏನೋ, ನಮ್ಮ ಮಾತಿಗೆ ಮನ್ನಣೆ ಕೊಡಬಾರದೆಂಬ ಭಾವನೆಯಿಂದಲೋ ಏನೋ ಯಾವುದನ್ನೂ ಮಾಡಿಲ್ಲ.

2-30 P.M.

Mr. SPEAKER.—What is the estimate of that project ?

ಶ್ರೀ ಬಿ. ರಾಚಯ್ಯ.—ಒಂದು ಲಕ್ಷ ಹದಿಮೂರು ಸಾವಿರ ರೂಪಾಯಿಗಳು. ತಾವೂ ಸಹ ಹಿಂದೆ ಆಲೂರಿಗೆ ಕಾಲು ನಡಿಗೆಯಲ್ಲೇ ಬಂದಿದ್ದಿರಿ. ಆ ವೇಳೆಯಲ್ಲಿ ತಾವೂ ಸಹ ಇದನ್ನು ಮಾಡಿಸಿಕೊಡುವುದಾಗಿ ವಾಗ್ದಾನ ಮಾಡಿದ್ದಿರಿ. ಆಗ ಇದಕ್ಕೆ 1 ಲಕ್ಷ 13 ಸಾವಿರದ ಅಂದಾಜ ತಯಾರಿಸಲಾಯ್ತು. ಇದು ಬಹಳ ಅವಶ್ಯಕವಾದ ಸೇತುವೆ. ಈ ಸೇತುವೆ ಆಗಬೇಕಾದುದು ಅತ್ಯಾವಶ್ಯಕವೆಂದು ತಾವೂ ಕೂಡ ಆಗ ಒಪ್ಪಿಕೊಂಡಿದ್ದಿರಿ.

Sri KADIDAL MANJAPPA.—The cut motion relates to the condition of roads and the member is talking about projects.

ಶ್ರೀ ಬಿ. ರಾಚಯ್ಯ.—ಆ ರೋಡಿನ ಮಧ್ಯದಲ್ಲೇ ಈ ಸೇತುವೆ ಇರುವುದು. ತಾವು ಹಿಂದೆ ಮಾಡಿರತಕ್ಕ ವಾಗ್ದಾನವನ್ನು ಉಳಿಸಿಕೊಳ್ಳತಕ್ಕ ಬಗ್ಗೆ ಈ ಕೆಲಸವನ್ನು ಈ ವರ್ಷವೇ ಕೈಕೊಳ್ಳಬೇಕೆಂದು ಸರ್ಕಾರದವರನ್ನು ಒತ್ತಾಯಪಡಿಸತಕ್ಕ ಬಗ್ಗೆ ನಾನೀಗ ಈ ಖೋತಾ ಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER.—Cut motion Moved :

"That the demand be reduced by Rs. 100."

Sri KADIDAL MANJAPPA.—I wish the Hon'ble Member has travelled in malnad parts in the State. I have travelled both in Chamarajanagar and Yelandur Taluks and also in malnad parts. The condition in malnad taluks really, if I may say so, is horrible.

Mr. SPEAKER.—There is a cut motion also relating to malnad roads.

Sri KADIDAL MANJAPPA.—I concede that the conditions of the roads in Chamarajanagar and Yelandur taluks are not satisfactory. The Hon'ble member referred to my promise made on the floor of the House in connection with an interpellation. I may assure the Hon'ble Member that, if I have made any such promise, I will try to fulfil the promise. A remark was made by the Hon'ble Member that the Government are not paying attention towards Chamarajnagar and Yelandur Taluks, perhaps on the ground that these Taluks are not represented by people belonging to the Congress Party. I may assure the Member that no distinction is being made on the ground that a member who represents the Taluk does not belong to the Congress Party. That is not at all the case. The Government are there to run the administration in the interest of the whole State. I represent not only Thirthahalli Taluk, but I also represent the whole State. Therefore, the Hon'ble Member need not have in his mind any such apprehensions. The grants are not distributed by the Government straightaway. They are distributed by the departmental heads on the basis of the necessity, urgency and the availability of the funds.

(SRI KADIDAL MANJAPPA.)

Regarding the condition of roads in general, I wish to say a few words. The length of roads in Mysore State is about 12,000 miles. The mileage grant that we are giving ranges between Rs. 200 to Rs. 1,000, depending upon the importance of the roads. Recently, at a meeting of the Road Reclassification Committee, the Government and the District Boards have come to an understanding that the Government should take over important third class roads and maintain themselves without asking any contribution from the District Boards and that the District Boards should maintain all the other roads. Therefore, the formation of new roads hereafter will be the responsibility of the District Boards themselves and not that of the Government on account of that understanding and we have taken over third class roads to a length of about 2,500 miles and the liability of the Government has increased to a great extent. I may assure the Hon'ble Member that the Government will keep in mind all the suggestions made by him and we will try to improve the conditions of the roads not only in Yelandur and Chamarajanagar but throughout the State.

ಶ್ರೀ ಬಿ. ರಾಚಯ್ಯ.—ಹಿಂದೆ ತಾವು ಈ ಪ್ರಾಜೆಕ್ಟನ್ನು ಮಾಡಿಸಿಕೊಡುತ್ತೇವೆಂದು ಪ್ರಾಮಿಸ್ ಮಾಡಲಿಲ್ಲವೇ ?

Sri KADIDAL MANJAPPA.—If I have made a promise, I will keep up to the promise.

Sri B. RACHIAH.—In view of the assurance by the Hon'ble Minister, I seek leave to withdraw the cut motion.

The cut motion was, by leave, withdrawn.

Steps taken to repair Roads and Bridges damaged by recent rains in malnad parts.

ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ, ನನ್ನ ಖೋತಾ ಸೂಚನೆಯು ಈ ರೀತಿಯಾಗಿದೆ.—

"50. ಸಿವಿಲ್ ಕಾಮಗಾರಿಗಳು" ಎಂಬ ಬಾಬಿನಲ್ಲಿ ಕೋರಿರತಕ್ಕ 15,20,500 ರೂಪಾಯಿಗಳ "ಡಿಮ್ಯಾಂಡ್" ಮನವಿಯ ಸಂಬಂಧದಲ್ಲಿ 100 ರೂಪಾಯಿಗಳನ್ನು ಕಡಮೆಮಾಡಬೇಕು (ಮಲೆನಾಡು ಭಾಗಗಳಲ್ಲಿ ಇತ್ತೀಚೆಗೆ ಅಧಿಕವಾಗಿ ಮಳೆಯಾದುದರ ಪ್ರಯುಕ್ತವಾಗಿ ರಸ್ತೆಗಳಿಗೂ ಮತ್ತು ಸೇತುವೆಗಳಿಗೂ ಎಷ್ಟರ ಮಟ್ಟಿನ ಅಪಾಯ ಉಂಟಾಯಿತೆಂಬುದನ್ನೂ ಮತ್ತು ಅವುಗಳನ್ನು ಜೀರ್ಣೋದ್ಧಾರಗೊಳಿಸಲು ಸರ್ಕಾರದವರು ಯಾವ ಕಾರ್ಯಕ್ರಮಗಳನ್ನು ಕೈಕೊಂಡಿರುತ್ತಾರೆಂಬುದನ್ನೂ ತಿಳಿದುಕೊಳ್ಳುವುದಕ್ಕಾಗಿ)."

ಸ್ವಾಮಿ, ಈಗತಾನೆ ಇದೇ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ತಿಳಿಸಿದಹಾಗೆ ಅತ್ಯಂತ ಹಿಂದುಳಿದ ಕ್ಷೇತ್ರಗಳಿಂದ ಆರಿಸಿ ಬಂದಿರತಕ್ಕಂಥ ಸದಸ್ಯರುಗಳ ಪೈಕಿ ನಾನೂ ಒಬ್ಬ. ನಾನು ಈ ಹಿಂದೆ ಬೆಂಗಳೂರಿಗೆ ಬಂದಿದ್ದಾಗ ಮಾನ್ಯ ರೆವಿನ್ಯೂ ಮಂತ್ರಿಗಳು ನನಗೆ ಒಂದು ಪ್ರಶ್ನೆ ಹಾಕಿ, ರಸ್ತೆಗಳು ಹೇಗಿವೆ? ಎಂದು ಕೇಳಿದಾಗ ಅವರ ಪ್ರಶ್ನೆಗೆ ಸಹಜವಾಗಿಯೇ ಮಲೆನಾಡಿನಲ್ಲಿರತಕ್ಕ ರಸ್ತೆಗಳು ಕೆಟ್ಟುಹೋಗಿ ಅವುಗಳು ಪ್ರಯಾಣ ಸೌಕರ್ಯಕ್ಕೆ ಯೋಗ್ಯವಾಗಿಲ್ಲವೆಂದು ಉತ್ತರ ಕೊಟ್ಟಿದ್ದೆ. ನಾನು ಮೊನ್ನೆತಾನೆ ಬಸ್ಸಿನಲ್ಲಿ ನನ್ನ ಊರಿಗೆ ಪ್ರಯಾಣಮಾಡುತ್ತಿದ್ದಾಗ ನಡೆದಂಥ ಒಂದು ದುರಂತ ಪ್ರಸಂಗ ನನಗೆ ಜ್ಞಾಪಕಕ್ಕೆ ಬರುತ್ತಿದೆ.

ಇಲ್ಲಿಗೆ ನಾನು ಬರುವುದಕ್ಕೆ ಕೆಲವು ದಿವಸಗಳ ಹಿಂದೆ ಬಸ್ಸಿನಲ್ಲಿ ಶಿವಮೊಗ್ಗೆಯಿಂದ ರಿಪ್ಪನ್ ಪೇಟೆಯ ಮಾರ್ಗವಾಗಿ ಆಗರಕ್ಕೆ ಪ್ರಯಾಣ ಮಾಡುತ್ತಿದ್ದಾಗ ರಿಪ್ಪನ್‌ಪೇಟೆಯಲ್ಲಿ ಒಂದು ವಿಷಯ ತಿಳಿಯಿತು. ಏನೆಂದರೆ ಕೋಣಂದೂರಿನಿಂದ ರಿಪ್ಪನ್‌ಪೇಟೆಗೆ ಬಸ್ಸಿನಲ್ಲಿ ಪ್ರಯಾಣ ಮಾಡಿದ್ದರ ಫಲವಾಗಿ ಒಬ್ಬ ಗರ್ಭಿಣಿ ಸ್ತ್ರೀಗೆ ಗರ್ಭಸ್ರಾವವಾಗಿ ಜನನವಾದ ಮಗು ಅಲ್ಲೇ ತೀರಿಕೊಂಡಿತು. ಈ ವಿಚಾರ ಕಟ್ಟು ಕಥೆ ಅಲ್ಲ, ನಡೆದ ಸಂಗತಿ. It is a fact. ಅಲ್ಲಿದ್ದವರೆಲ್ಲಾ ಅದಕ್ಕೆ ಕಾರಣ ಆಕೆ ಆ ದಿವಸ ಬಸ್ಸಿನಲ್ಲಿ ಪ್ರಯಾಣಮಾಡಿದ್ದೇ ಎಂದು ಹೇಳಿರುತ್ತಾರೆ, ಹೀಗೆ ಅಲ್ಲಿ ರಸ್ತೆಗಳು ಆಷ್ಟರ ಮಟ್ಟಿಗೆ ಕೆಟ್ಟುಹೋಗಿದ್ದರೂ ಬಸ್ಸುಗಳಂತೂ ಓಡಾಡುತ್ತಲೇ ಇವೆ. ಅಲ್ಲಿಯ ರಸ್ತೆಗಳು ಅಷ್ಟು ಬೇಗ ಹೀನಸ್ಥಿತಿಗೆ ಬರುವುದಕ್ಕೆ ಕಾರಣ ಒಂದು ವರ್ಷವೆಲ್ಲಾ ಬೀಳಬೇಕಾಗಿದ್ದಂಥ ಮಳೆಯಲ್ಲಿ ಅರ್ಧಭಾಗ ಕೇವಲ 10–12 ದಿವಸಗಳ ಅವಧಿಯಲ್ಲೇ ಬಿದ್ದುದರಿಂದ ಹಾಗೆ ರಸ್ತೆಗಳು ಕೆಡಲು ಕಾರಣವಾಯಿತು. ಅನೇಕ ಪ್ರದೇಶಗಳಲ್ಲಿ ನೀರು ನೆಲದಿಂದ ಮೇಲಕ್ಕೆ ಬುಗ್ಗೆಗಳಲ್ಲಿ ಏಳುವಂತೆ ಏಳುತ್ತಿದೆ. ಈ ರೀತಿಯಾಗಿ, ವಾಹನ ಸಂಚಾರದ ಮಾತು ಹಾಗಿರಲಿ, ಜನರು ತಿರುಗಾಡುವುದಕ್ಕೂ ಸಹ ಅವಕಾಶವಿಲ್ಲದಂತೆ ಅಷ್ಟರವರೆಗೂ ಅಲ್ಲಿ ಕಷ್ಟವಾಗಿದೆ. ಇನ್ನು ಈ ಹಿರೇಭಾಸ್ಕರ ಪ್ರಾಜೆಕ್ಟಿನ ಕಡೆ ಊರುಗಳ ಸುತ್ತಲೂ ನೀರು ನಿಂತು ಅವು ದ್ವೀಪದೋಪಾದಿಯಾಗಿವೆ. ಅವುಗಳನ್ನು ದಾಟಿಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಕಾಲು ನಡೆಗೆಗೇ ದಾರಿ ಇಲ್ಲವೆಂದು ಹೇಳುತ್ತಿರುವಾಗ ಇನ್ನು ಗಾಡಿಗಳು ಹೇಗೆ ತಾನೆ ಹೋಗಬಲ್ಲವು ! ಶಿವಮೊಗ್ಗಾದಿಂದ ಹೊಸನಗರ ಮತ್ತು ಆಗುಂಬೆಗೆ ಹೋಗತಕ್ಕ ರಸ್ತೆಗಳಲ್ಲಿ ಸುಮಾರು ಎರಡು ವಾರಗಳವರೆಗೆ ಯಾವ ಬಸ್ ಪ್ರಯಾಣಗಳೂ ನಡೆಯುತ್ತಿಲ್ಲ, ನಿಂತುಹೋಗಿರುತ್ತವೆಂಬ ವಿಷಯ ಈಗಾಗಲೇ ಪತ್ರಿಕೆಗಳಲ್ಲಿ ಕೂಡ ಪ್ರಕಟವಾಗಿದೆ. ಅನೇಕಕಡೆ ಸಣ್ಣಸಣ್ಣ ಮೋಹರಿಗಳೆಲ್ಲಾ ಕೆಟ್ಟುಹೋಗಿವೆ, ನೀರು ಅವುಗಳ ಮೇಲೆಲ್ಲಾ ವಿಶೇಷವಾಗಿ ಮಣ್ಣನ್ನು ತಂದುಹಾಕಿರುತ್ತದೆ. ಹೀಗೆಲ್ಲಾ

ಆಗಿ ರಸ್ತೆಗಳು ಸಂಚಾರಕ್ಕೆ ಸ್ವಲ್ಪವೂ ಯೋಗ್ಯವಾಗಿರುವುದಿಲ್ಲ. ಈ ರಸ್ತೆಗಳು ಕೇವಲ ಬಸ್ಸು, ಲಾರಿ ಇತ್ಯಾದಿಗಳ ಸಂಚಾರಕ್ಕೆ ಮಾತ್ರ ಕೆಟ್ಟಿರುತ್ತವೆಂದಲ್ಲ. ಇವು ಜನರು ಸಂಚಾರ ಮಾಡುವುದಕ್ಕೂ ಕೂಡ ಯೋಗ್ಯವಾಗಿರುವುದಿಲ್ಲ. ಅಷ್ಟರಮಟ್ಟಿಗೆ ಡ್ಯಾಮೇಜ್ ಆಗಿ ಹೋಗಿವೆ. ಸರ್ಕಾರದವರು ಈ ರಸ್ತೆಗಳ ವಿಚಾರದಲ್ಲಿ ಹೆಚ್ಚಿನ ನಿಗಾ ತೆಗೆದುಕೊಂಡು ಜನರಿಗೆ ಸಂಚಾರ ಸೌಕರ್ಯಗಳನ್ನು ಒದಗಿಸದೆ ಹೋದರೆ ಅವರಿಗೆ ತುಂಬಾ ತೊಂದರೆಯಾಗುತ್ತದೆ. ಅರಸಾಳಿನಿಂದ ರಿಪ್ಪನ್‌ಪೇಟೆಗೆ ಬರತಕ್ಕ ರಸ್ತೆಯಲ್ಲಿ ಒಂದು ಸೇತುವೆ ಬಹಳ ದಿನಗಳಿಂದಲೂ ಡ್ಯಾಮೇಜಾಗಿಹೋಗಿದೆ. ಇಲಾಖೆಯವರೇ ಇದು ಭದ್ರವಾಗಿಲ್ಲವೆಂದು ತಿಳಿಸಿದ್ದಾರೆ. ಆದಾಗ್ಯೂ ಆ ರಸ್ತೆಯಲ್ಲಿ ಯಥಾಪ್ರಕಾರ ಬಸ್ಸುಗಳ ಓಡಾಟ ನಡೆಯುತ್ತಲೇ ಇದೆ. ಅಂದರೆ ಅವರು ಆ ಸೇತುವೆಯಬಳಿಗೆ ಹೋಗುತ್ತಿದ್ದಹಾಗೆಯೇ ಅಲ್ಲಿ ಬಸ್ಸನ್ನು ನಿಲ್ಲಿಸಿಬಿಟ್ಟು ಪ್ರಯಾಣಿಕರನ್ನು ಮತ್ತು ಅವರ ಸಾಮಾನು ಸರಂಜಾಮುಗಳನ್ನು ಆ ಸೇತುವೆಯ ಆಚೆಕಡೆಗೆ ನಿಂತಿರುವ ಬೇರೊಂದು ಬಸ್ಸಿಗೆ ಸಾಗಿಸಿ ಅನಂತರ ಪ್ರಯಾಣಿಕರನ್ನು ಮುಂದಕ್ಕೆ ಸಾಗಿಸಿಕೊಂಡು ಹೋಗುತ್ತಿದ್ದಾರೆ. ಹೀಗೆ ನನಗೆ ಈ ಬಸ್ಸಿನಲ್ಲಿ ಪ್ರಯಾಣಮಾಡತಕ್ಕವರ ವಿಚಾರವೇನೋ ಗೊತ್ತಿದ್ದುದರಿಂದ ಹೇಳಿದೆನು. ಆದರೆ ಲಾರಿಗಳವರೂ ಸಹ ಇದೇ ರೀತಿಯಾಗಿ ಮಾಡುತ್ತಾರೋ ಹೇಗೋ ಅದು ನನಗೆ ತಿಳಿಯದು. ನಾವು ಹೀಗೆ ನಾದುರಸ್ತಿನಲ್ಲಿರುವ ಸೇತುವೆಗಳಾವುವೆಂಬುದಾಗಿ ಇಲಾಖೆಯವರನ್ನೇ ಕೇಳಿದರೆ ಅವರು ಒಂದು ಉದ್ದವಾದ ಪಟ್ಟಿಯನ್ನೇ ಕೊಡುತ್ತಾರೆ. ಮಜ್ಜಿಗೆ ಹಳ್ಳಕ್ಕೆ ಒಂದು ಸೇತುವೆ ಆಗಬೇಕೆಂದು ತೀರ್ಮಾನವಾಗಿದೆ. ಅಂದಾಜು ಸ್ಯಾಂಕ್ಷನ್ ಆಗಿದ್ದರೂ ಅಲ್ಲಿ ಕೆಲಸವನ್ನು ಪ್ರಾರಂಭಿಸುವುದಕ್ಕೆ ಇನ್ನೂ ಹುಕುಂ ಬಂದಿರುವುದಿಲ್ಲ. ಅಂತೂ ಆ ಸೇತುವೆ ರಚನೆ ಬೇಗ ಆಗುವ ಚಿಹ್ನೆಗಳೂ ಕಂಡುಬರುತ್ತಿಲ್ಲ. ಯಾವ ಒಂದು ಆಶ್ವಾಸನವನ್ನು ಸರ್ಕಾರದವರು ಕೊಟ್ಟು ಇಂಥಾ ಕೆಲಸಗಳನ್ನು ಮಾಡಬೇಕೆಂದು ಇಷ್ಟಪಡುತ್ತಾರೋ ಅಂಥ ಕೆಲಸಗಳನ್ನು ಸಹ ಕೊನೆಯತನಕ; ಸರ್ಕಾರಕ್ಕೆ ಒತ್ತಾಯ ಪಡಿಸುವವರೆಗೂ, ಅದನ್ನು ಹಿಂದಕ್ಕೆ ಹಾಕಲು ಪ್ರಯತ್ನಿಸುತ್ತಿದ್ದಾರೆಂದರೆ ಅದೇನೂ ತಪ್ಪಾಗಲಾರದು. ಅಂತೂ ಹೀಗೆ ಮಳೆಯ ಹಾವಳಿಯಿಂದ ಮಲೆನಾಡಿನಲ್ಲಿ ಎಲ್ಲ ರಸ್ತೆಗಳಿಗೂ ವಿಪರೀತ ಲುಕ್ಸಾನಾಗಿದೆ. ಇದುವರೆಗೂ ಎಂದೂ ಇಂಥ ಪ್ರವಾಹ ಬಂದಿರಲಿಲ್ಲ. ಹೀಗೆ ವಿಶೇಷವಾಗಿ ಮಳೆ ಬಿದ್ದುದು "ಧುರ್ಭಿಕ್ಷದಲ್ಲಿ ಅಧಿಕಮಾಸ ಬಂದಹಾಗೆ" ಆಗಿದೆ. ವೇಳೆಗೆ ಸರಿಯಾಗಿ ಮಳೆ ಪ್ರಾರಂಭವಾಗದೆ ದುರ್ಭಿಕ್ಷಕ್ಕೆ ದಾರಿಮಾಡಿತು. ಹೀಗೆ ಮಳೆ ಪ್ರಾರಂಭವಾದದ್ದೇ ತಡವಾಗಿದ್ದರೂ, ಇದು ಒಂದೇ ಸಮನಾಗಿ ಬಿದ್ದುದರಿಂದ ಭೂಮಿಯಲ್ಲಿದ್ದ ಸಾರವೆಲ್ಲಾ ಕೊಚ್ಚಿಹೋಗಿದೆ.

ನಾನು ಹೋಗಿ ನೋಡಿದಾಗ ಎಲ್ಲಿಹೋದರೂ ಚರ್ಮ ಸಾಗಿಸುತ್ತಿರುವ ದೃಶ್ಯವೇ ಕಣ್ಣಿಗೆ ಬಿತ್ತು! ಎಷ್ಟೋ ಪ್ರಾಣಿಗಳು ಚರ್ಮ ಸುಲಿಯದೆ ಸತ್ತುಬಿದ್ದಿದ್ದುವು. ಇದು ಪತ್ರಿಕೆಯಲ್ಲಿಯೂ ಬಂದಿತ್ತು. ಒಂದೇ ಮನೆಯಲ್ಲಿ ಸುಮಾರು 40-50 ಕಾಲ್ನಡೆಗಳು ಸತ್ತುಹೋಗಿದ್ದುದೂ ಉಂಟು. ಈಗಲೂ ಕೆಲವು ಜಾನುವಾರು ರೋಗಗಳು ಈ ಮಲೆನಾಡು ಪ್ರದೇಶದಲ್ಲಿವೆ. ಆದ್ದರಿಂದ ಹೆಚ್ಚಿನ ಹಾನಿ ಜಾನುವಾರುಗಳಿಗೆ ತಟ್ಟಿದೆ.

ಎರಡನೆಯದಾಗಿ, ಬೀಜದ ಬತ್ತ ಬಿತ್ತಿದ್ದುದು ಹುಟ್ಟುವುದಕ್ಕೆ ಮುಂಚೆಯೇ ನೀರಿನಲ್ಲಿ ಮುಳುಗಿದ್ದು ಎಲ್ಲ ನಾಶವಾಗಿಹೋಗಿದೆ. ಬತ್ತದ ಫಸಲಿಗೆ ಈ ಪ್ರಕಾರ ನಷ್ಟವಾಗಿರುವ ಬಗ್ಗೆ ಈಗಾಗಲೇ ಅನೇಕರು ಸಂಚಾರಮಾಡಿ ಅಂಕಿಅಂಶಗಳನ್ನು ಸಂಗ್ರಹಿಸಿದ್ದಾರೆ. ಆದರೆ ಈ ವಿಷಯದಲ್ಲಿ ಕಾಲ ವಿಳಂಬವಾದರೆ ಏನು ಸಹಾಯ ಮಾಡಿದರೂ ಉಪಯೋಗಕ್ಕೆ ಬಾರದೆಹೋಗಬಹುದು. ಮುಖ್ಯವಾಗಿ ಆ ಪ್ರದೇಶದ ಜನರಿಗೆ ಬಂದಿರುವ ಒಂದು ಸಂದಿಗ್ಧ ಪರಿಸ್ಥಿತಿಯೆಂದರೆ, ಅವರ ಪ್ರತಿನಿಧಿಗಳಲ್ಲಿ ಒಬ್ಬರು ಮಂತ್ರಿಗಳು; ಇನ್ನೊಬ್ಬರು ಈ ಸಭೆಯ ಅಧ್ಯಕ್ಷರು. ಹೀಗಾಗಿ ಇನ್ನುಳಿದಿರುವ ಒಬ್ಬ ಪ್ರತಿನಿಧಿ ಅಲ್ಲಿನ ಜನರನ್ನು ಪ್ರತಿನಿಧಿಸಲಿಕ್ಕಿರುವವನು ನಾನೊಬ್ಬ. ಹೀಗಾಗಿ ಮಳೆ ಎಲ್ಲಿ ಹೆಚ್ಚಾಗಿ ಬಂದು ಬೀಜದ ಬತ್ತವೆಲ್ಲಾ ಲುಕ್ಸಾನಾಗಿದೆಯೋ ಅದನ್ನು ಮಾನ್ಯ ಸಭೆಯ ಗಮನಕ್ಕೆ ತರುವವರ ಸಂಖ್ಯೆ ಈ ಸಭೆಯಲ್ಲಿ ಕಡಮೆಯಿದೆಯೆಂದು ಹೇಳಬೇಕಾಗಿದೆ. ಆದುದರಿಂದ ಇನ್ನು ಮೇಲಾದರೂ ಹೆಚ್ಚಿನ ಪರಿಹಾರವನ್ನು ಆ ಭಾಗಗಳಿಗೆ ಒದಗಿಸಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಮನವಿಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯವೇನೆಂದರೆ: ವರದಾ ನದಿಯ ಪ್ರವಾಹವನ್ನು ಹತೋಟಿಗೊಳಿಸುವುದು. ಹಿಂದೆಯೇ ಕೇಂದ್ರ ಸರ್ಕಾರದವರಿಗೆ ಈ ನದಿಯ ವಿಷಯದಲ್ಲಿ ಒಂದು ಮನವಿಯನ್ನೂ ಸಹ ಕಳುಹಿಸಿತ್ತೆಂದು ನಾನು ತಿಳಿದಿದ್ದೇನೆ. ಈ ವರದಾ ನದಿಯ ಪ್ರವಾಹ ಒಮ್ಮೊಮ್ಮೆ ಎಷ್ಟು ಹೆಚ್ಚು ಬರುತ್ತದೆಂದರೆ, ಅಕ್ಕಪಕ್ಕದ ಊರುಗಳು ಅಪಾಯಕ್ಕೊಳಗಾಗುವಷ್ಟು ಹುಚ್ಚುಹೊಳೆ ಹರಿಯುತ್ತದೆ. ಈ ಸಂದರ್ಭದಲ್ಲಿಯೂ ಆ ಪ್ರದೇಶವೆಲ್ಲಾ ದ್ವೀಪದೋಪಾದಿಯಾಗಿ ಅಲ್ಲಿನ ಜನರು ಅನೇಕ ದಿವಸಗಳು ಓಡಾಡುವುದಕ್ಕೇ ಅವಕಾಶವಿಲ್ಲದಂತಾಗಿತ್ತು.

ಒಬ್ಬ ಸದಸ್ಯರು.—ನಿಮ್ಮ ಮಂತ್ರಿಗಳೇ ಇದಾರಲ್ಲ.

ಶ್ರೀ ಎಸ್. ಗೋಪಾಲಗೌಡ.—ನಮ್ಮ ಮಂತ್ರಿಗಳನ್ನೇ ಇಟ್ಟುಕೊಳ್ಳುವದರಿಂದ ಏನು ತೊಂದರೆಯಿದೆಯೆಂಬುದು ಅಲ್ಲಿನ ಜನರಿಗೆ ಈಗಾಗಲೇ ಗೊತ್ತಾಗಿದೆ.

ಆದ್ದರಿಂದ ಕೇವಲ ಮಾತನಾಡಬೇಕೆಂಬ ಉದ್ದೇಶದಿಂದ ನಾನು ಮಾತನಾಡುತ್ತಿಲ್ಲ. ಇದನ್ನು ಸರ್ಕಾರದವರು ಖಂಡಿತವಾಗಿ ಮಾಡಿಸಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಮನವಿಮಾಡಿಕೊಳ್ಳುತ್ತೇನೆ. ಇಷ್ಟು ಹೇಳಿ ಈ ಛೋತಾ ನಿರ್ಣಯವನ್ನು ಸಭೆಯ ಮುಂದಿಡಲು ಅಪ್ಪಣೆ ಬೇಡುತ್ತೇನೆ.

Mr. SPEAKER.—Cut motion moved:

"That the demand be reduced by Rs. 100."

ಶ್ರೀ ಕಡಿದಾಳ್ ಮಂಜಪ್ಪ.—ಸ್ವಾಮಿ, ಮಲೆನಾಡು ಪ್ರದೇಶದಲ್ಲಿ ಹೆಚ್ಚಿಗೆ ಮಳೆ ಬರುತ್ತಿರುವುದರಿಂದ ಸಾಮಾನ್ಯವಾಗಿ ರಸ್ತೆಗಳ ಪರಿಸ್ಥಿತಿ ಚೆನ್ನಾಗಿಲ್ಲ. ಅದರಲ್ಲೂ ಈ ವರ್ಷ ಅನಿರೀಕ್ಷಿತವಾಗಿ ಒಂದೇ ಸಾರಿ ವಿಪರೀತ ಮಳೆ ಬಂದುದರ ಪರಿಣಾಮವಾಗಿ ಅನೇಕ ರಸ್ತೆಗಳು 8 ದಿವಸಗಳ ಗಟ್ಟಲೆ ನೀರಿನಲ್ಲಿ ಮುಳುಗಿದ್ದರಿಂದ ಅವುಗಳ ಪರಿಸ್ಥಿತಿ ಕೆಟ್ಟುಹೋಗಿದೆ. ಕೆಟ್ಟುಹೋದ ಈ ರಸ್ತೆಗಳನ್ನು ದುರಸ್ತುಮಾಡಬೇಕೆಂದು ಹೇಳಿ ಪಬ್ಲಿಕ್ ವರ್ಕ್ಸ್ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದೆ. ಅವರು ದುರಸ್ತುಮಾಡುತ್ತಿದ್ದಾರೆಂಬುದಾಗಿ ವರದಿಕೂಡ ಬಂದಿದೆ. ಶ್ರೀ ಗೋಪಾಲಗೌಡರು ಒಬ್ಬ ಮಹಿಳೆ ಈ ರಸ್ತೆಯಲ್ಲಿ ಪ್ರಯಾಣ ಮಾಡುತ್ತಿದ್ದ ಸನ್ನಿವೇಶವನ್ನು ಸಭೆಯ ಗಮನಕ್ಕೆ ತಂದು ಆ ಮಹಿಳೆಗೆ ಗರ್ಭಸ್ರಾವವಾದ ವಿಷಯವನ್ನು ತಿಳಿಸಿದರು. ಸ್ತ್ರೀಯರಿಗೆ ಗರ್ಭಸ್ರಾವವಾಗುವುದು ಕೆಟ್ಟ

(ಶ್ರೀ ಕಡಿದಾಳ್ ಮಂಜಪ್ಪ.)

ರಸ್ತೆಯಲ್ಲಿ ಹೋದರೆ ಮಾತ್ರ ಆಗುತ್ತದೆಂದು ಭಾವಿಸಿದ್ದರೆ ಅವರಿಗೆ ಅನುಭವ ಸಾಲದು ಎಂದು ಹೇಳಬೇಕು ಅಷ್ಟೆ. ಸಾಮಾನ್ಯವಾಗಿ 8ನೆಯ ತಿಂಗಳಲ್ಲಿ ಒಳ್ಳೆಯ ರಸ್ತೆಯಲ್ಲಿ ಹೋದರೂ ಕೂಡ ಗರ್ಭಸ್ರಾವವಾಗತಕ್ಕ ಸಂಭವವುಂಟು. ಆದ್ದರಿಂದ ಈ ರಸ್ತೆಯಲ್ಲಿ ಪ್ರಯಾಣ ಮಾಡಿದ ಮಾತ್ರದಿಂದಲೇ ಗರ್ಭಸ್ರಾವವಾಯಿತೆಂಬ ನಿರ್ಧಾರಕ್ಕೆ ಮಾನ್ಯ ಸದಸ್ಯರು ಬರುವುದಕ್ಕಾಗುವುದಿಲ್ಲವೆಂದು ನಾನು ಹೇಳಲಿಚ್ಛಿಸುತ್ತೇನೆ.

ಆಮೇಲೆ ಅರಸಾಳು-ರಿಬ್ಬನ್‌ಪೇಟೆ ಮಧ್ಯೆ ಇರತಕ್ಕ ಸೇತುವೆಯ ವಿಚಾರವನ್ನು ಅವರು ಪ್ರಸ್ತಾಪಿಸಿದರು. ಈ ಸೇತುವೆ ರಿಪೇರಿಗಾಗಿ ಅಧಿಕಾರಿಗಳಿಗೆ ಆಗಲೇ ತಿಳಿಸಿದೆ. ಈ ಸಂದರ್ಭದಲ್ಲಿ ಎಸ್ಟಿಮೇಟ್ ಕೂಡಾ ತಯಾರಾಗಿದೆ. ಮಳೆಗಾಲ ನಿಂತ ನಂತರ ಈ ಕೆಲಸವನ್ನು ಕೈಕೊಳ್ಳಲಾಗುತ್ತದೆ.

ಬೀಜದ ಬತ್ತದ ವಿಚಾರವನ್ನೂ ಮತ್ತು ವರದಾ ನದಿಯ ಪ್ರವಾಹವನ್ನು ತಡೆಗಟ್ಟುವ ವಿಚಾರವನ್ನೂ ಅವರು ಪ್ರಸ್ತಾಪಿಸಿದರು. ಈ ಕತ್ತರಿ ನಿರ್ಣಯಕ್ಕೆ ಸಂಬಂಧಪಟ್ಟಿಲ್ಲದಿರುವ ವಿಷಯವಾಗಿದ್ದರೂ, ಇದರ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳ ಬಯಸುತ್ತೇನೆ. ಹೆಚ್ಚು ಪ್ರವಾಹ ಬಂದಿರುವ ಕಡೆಗಳಲ್ಲಿ ವ್ಯವಸಾಯದ ಇಲಾಖೆಯ ಅಧಿಕಾರಿಗಳು ಆ ಕಡೆ ಸಂಚಾರಮಾಡಿ ಹೆಚ್ಚಿಗೆ ಬೀಜದ ಬತ್ತವನ್ನು ಒದಗಿಸಲು ಪ್ರಯತ್ನಮಾಡಿದ್ದಾರೆ. ವರದಾನದಿಯ ಪ್ರವಾಹವನ್ನು ತಡೆಗಟ್ಟುವುದು ದೊಡ್ಡ ವಿಚಾರ. ಇದರ ಬಗ್ಗೆ ನಿರ್ದಿಷ್ಟವಾಗಿ ಉತ್ತರವನ್ನು ಹೇಳಲು ನಾನೀಗ ತಯಾರಾಗಿಲ್ಲ. ಆದ್ದರಿಂದ ಈ ವಿಚಾರವನ್ನು ನಾನೀಗ ಪ್ರಸ್ತಾಪಿಸುವುದಕ್ಕೆ ಹೋಗುವುದಿಲ್ಲ.

ಇಷ್ಟು ಹೇಳಿದ ಮೇಲೆ ಮಾನ್ಯ ಮಿತ್ರರು ತಮ್ಮ ಕತ್ತರಿ ನಿರ್ಣಯವನ್ನು ವಾಪಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

Sri S. GOPALA GOWDA.—I seek the leave of the House to withdraw my cut motion.

The cut motion was, by leave, withdrawn.

Mr. SPEAKER.—The next cut motion stands in the name of Sri. G. Sivappa. This subject about the road from Harihar to Bangalore is already talked out. Sri Mohamed Imam has referred to this matter. In view of the discussion that has already taken place regarding this subject, I disallow this cut motion. The next cut motion may be moved by Sri. G. Sivappa.

Necessity of Completing the Road from Chitrahalli to Kobalu.

*ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ).—ಸ್ವಾಮಿ, ನನ್ನ ಖೋತಾ ಸೂಚನೆ ಈರೀತಿ ಇದೆ:—

"The demand under the head '50 Civil Works' for Rs. 15,20,500 be reduced by Rs. 100 (to raise a debate on the necessity of completing the road from Chitrahalli to Kobalu *via* Horakedevapura and Nandana Hosur and Thekalavatti)."

ಸ್ವಾಮಿ, ಇದು ಹೊಳಲ್ಕೆರೆ ತಾಲ್ಲೂಕಿನಲ್ಲಿರತಕ್ಕ ರಸ್ತೆ. ನಮ್ಮ ತಾಲ್ಲೂಕಿನಲ್ಲಿ ಈ ರಸ್ತೆ ಅತಿ 'neglect' ಆದ ರಸ್ತೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಈ ಪ್ರದೇಶದಲ್ಲಿ ಸುತ್ತಲೂ ಹೆಚ್ಚಿನ ಜನ ಸಂಖ್ಯೆಯಿರತಕ್ಕ ದೊಡ್ಡ ದೊಡ್ಡ ಹಳ್ಳಿಗಳು ಅನೇಕವಾಗಿವೆ. ಅಲ್ಲದೆ ಹೆಚ್ಚಿನ ಫಲವತ್ತಾದ ಜಮೀನು ಕೂಡ ಈ ಪ್ರದೇಶದಲ್ಲಿದೆ. ಹೀಗೆಲ್ಲಾ ಇದ್ದು ಈ ರಸ್ತೆ ಬಹಳ ಪ್ರಾಮುಖ್ಯವಾಗಿದ್ದರೂ ಮತ್ತು ಅನೇಕ ವರ್ಷಗಳಿಂದ ಈ ರಸ್ತೆ ಆಗಬೇಕೆಂದು ಅಲ್ಲಿನ ಪ್ರಜೆಗಳು ಮನವಿಮಾಡಿಕೊಂಡಿದ್ದರೂ ಇನ್ನೂ ಅದನ್ನು ಸರಿಮಾಡಿಕೊಟ್ಟಿಲ್ಲ. ಅಲ್ಲಿ ಸುತ್ತಮುತ್ತಲಿರುವ ಹಳ್ಳಿಗಳು ಕೇವಲ ಒಂದೆರಡಲ್ಲ, 20-25 ಹಳ್ಳಿಗಳಿವೆ. ಸಂಚಾರ ಸೌಕರ್ಯವಿಲ್ಲದೆ ಅಲ್ಲಿನ ಜನರಿಗೆ ಪ್ರಪಂಚದ ನಾಗರಿಕತೆಯ ಅನುಭವವೇ ಇಲ್ಲವೆಂದು ಹೇಳಿದರೂ ಅತಿಶಯೋಕ್ತಿಯಲ್ಲ. ಇದೇ ವಿಚಾರದಲ್ಲಿ ಹಿಂದೆ ಒಂದು ಪ್ರಶ್ನೆಯನ್ನು ಸಹ ನಾನು ಕಳುಹಿಸಿದ್ದೆ. ಅದಕ್ಕೆ ಮಾನ್ಯ ಮಂತ್ರಿಗಳು ಮಾಡಿಸಿಕೊಡುವುದಾಗಿ ಭರವಸೆ ಕೊಟ್ಟಿದ್ದರೂ ಇದುವರೆಗೂ ಯಾವ ಕಾರ್ಯಕ್ರಮವನ್ನೂ ಕೈಕೊಂಡಿಲ್ಲ. ಇತ್ತೀಚೆಗೆ ಐ.ವಿ.ಸಿ. ರೋಡ್ ಎಂಬದಾಗಿ ಹೇಳಿ ಈ ರಸ್ತೆಯ ಕೆಲಸವನ್ನು ಜಿಲ್ಲಾ ಬೋರ್ಡಿಗೆ ವರ್ಗಾಯಿಸಿದ್ದಾರೆ. ಜಿಲ್ಲಾ ಬೋರ್ಡಿನವರು ಇದರ ಕೆಲಸವನ್ನು ಒಬ್ಬ ಸ್ಯಾನಿಟರಿ ಇನ್ಸ್‌ಪೆಕ್ಟರಿಗೆ ವಹಿಸಿಕೊಟ್ಟು ಮಾಡಿಸಬೇಕೆಂದು ಹೇಳಿದ್ದಾರೆ. ಸ್ಯಾನಿಟರಿ ಇನ್ಸ್‌ಪೆಕ್ಟರಿಗೆ ರಸ್ತೆಯ ಕೆಲಸವನ್ನು ವಹಿಸಿದ್ದಾರೆಂದಮೇಲೆ, ಅವರಿಗೆ ರಸ್ತೆಯ formation ವಿಷಯದಲ್ಲಿ ಎಷ್ಟು ಮಾಹಿತಿಯಿದೆ, ಇನ್ನು ಅವರು ಎಷ್ಟುಮಟ್ಟಿಗೆ ರಸ್ತೆ ಮಾಡಿಸಿಯಾರು ಎಂಬುದು ತಮಗೇ ಗೊತ್ತಾಗುತ್ತದೆ. ಇದೇ ವಿಚಾರದಲ್ಲಿ ಎರಡುಸಾರಿ ತಮ್ಮಲ್ಲಿಗೆ ಒಂದು ಅರ್ಜಿಯನ್ನು ಸಹ ಕೊಟ್ಟಿದ್ದೇನೆ. ತಾವು ಅದನ್ನು ಕೆಳಗೆ ಕಳುಹಿಸಿದ್ದೇನೆಂದು ಹೇಳಿದರೂ ಇನ್ನೂ ಮಾಡಿಲ್ಲ. ಸರ್ಕಾರದವರಿಗೇನೂ ಇದೇನೂ ಹೆಚ್ಚಿನ ವಿಚಾರವಲ್ಲ. ಇದು ಅತ್ಯಾವಶ್ಯಕವಾದ ರಸ್ತೆಯಾಗಿದೆ. ಆದಷ್ಟು ಜಾಗ್ರತೆಯಾಗಿ ಮಾಡಿಸಿಕೊಡಬೇಕೆಂದು ಹೇಳಿ ಈ ಕತ್ತರಿ ನಿರ್ಣಯವನ್ನು ಸಭೆಯ ಮುಂದಿಡುತ್ತೇನೆ.

Mr. SPEAKER.—Cut motion moved:

"That the demand be reduced by Rs. 100."

ಶ್ರೀ ಮುಲ್ಕ ಗೋವಿಂದರೆಡ್ಡಿ (ಚಿತ್ರದುರ್ಗ).—ಶ್ರೀ ಶಿವಪ್ಪನವರು ತಂದಿರತಕ್ಕ ಈ ಖೋತಾ ನಿರ್ಣಯವನ್ನು ಸಮರ್ಥನೆಮಾಡುತ್ತಾ ಒಂದೆರಡು ವಿಷಯಗಳನ್ನು ಮಾತ್ರ ಹೇಳಬೇಕೆಂದಿದ್ದೇನೆ. ನಾನೂ ಈ ರಸ್ತೆಯಲ್ಲಿ 2-3 ಸಾರಿ ತಿರುಗಾಡಿದ್ದೇನೆ. ಬಹಳ ಕೆಟ್ಟಿದೆ. ಹೊಳಲ್ಕೆರೆ ತಾಲ್ಲೂಕಿನಲ್ಲಿ ಇದೊಂದು ಬಹಳ ಮುಖ್ಯವಾದ ರಸ್ತೆ. ಅನೇಕರು ಇದರಲ್ಲಿ ಪ್ರಯಾಣ ಮಾಡುತ್ತಾರೆ, ಈ ರಸ್ತೆಯಿಂದ ಅನೇಕ ಹಳ್ಳಿಗಳಿಗೆ ಅನುಕೂಲವಾಗುವುದರಿಂದ ಮತ್ತು ಡಿಸ್ಟ್ರಿಕ್ಟ್ ಬೋರ್ಡಿನವರು ತಮಗಿರತಕ್ಕ ಹಣಕಾಸಿನ ಪರಿಸ್ಥಿತಿಯಲ್ಲಿ ಇದನ್ನು ಮಾಡುವುದಕ್ಕಾಗುವುದಿಲ್ಲವಾದ್ದರಿಂದ, ಈ ರಸ್ತೆಯ ವಿಷಯವನ್ನು ಒಂದು special case ಆಗಿ ಭಾವಿಸಿ ಸರ್ಕಾರದವರೇ ಮಾಡಿಸಿಕೊಡಬೇಕೆಂದು ಹೇಳುತ್ತೇನೆ.

Sri KADIDAL MANJAPPA.—Strictly speaking, this cut motion does not come under Civil Works. This road is not in the charge of the Public Works Department. This is an I.V.C. road maintained perhaps by the District Board. I have no information regarding the condition of the road, and, as this does not pertain to the Public Works Department, I am not in a position to give a definite assurance. I may only say that the Government will examine the need for improving the road, sympathetically no doubt.

Sri G. SIVAPPA.—I beg leave of the House to withdraw the cut motion.

The cut motion was, by leave, withdrawn.

Mr. SPEAKER.—The question is:

> "That a supplementary sum not exceeding Rs. 15,20,500 be granted to the Government to defray the charges which will come in course of payment during the year ending 31st day of March 1954, in respect of 'Civil Works'."

The motion was adopted.

DEMAND No. 33.—STATIONERY AND PRINTING.

56. Stationery and printing.

Mr. SPEAKER.—Next, Demand No. 33. Motion moved:

> "That a supplementary sum not exceeding Rs. 30,920 be granted to the Government to defray the charges which will come in course of payment during the year ending 31st day of March 1954, in respect of 'Stationery and Printing.'"

The first cut motion stands in the name of Sri M. Linganna. He is not here. The second one is in the name of Sri S. Gopala Gowda. The question of policy cannot be debated upon under the Supplementary Grant.

Sri MULKA GOVINDA REDDY (Chitaldrug).—We will discuss on the main Grant.

ಸರ್ಕಾರದ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಕಾಲ ಕಾಲಕ್ಕೆ ಸರಿಯಾಗಿ ಪಠ್ಯಪುಸ್ತಕಗಳು ಪ್ರಿಂಟಾಗುತ್ತಿಲ್ಲ. ಆವಶ್ಯಕವಾಗಿ ಬೇಕಾದ ಆಕ್ಟ್ಗಳೇ ಸಿಕ್ಕುತ್ತಿಲ್ಲ. ಅನೇಕ ಸಾರಿ ಸ್ಟೇಟ್ ಟ್ರಾನ್ಸ್‌ಪೋರ್ಟ್ ಅಥಾರಿಟಿ, ರೀಜನಲ್ ಟ್ರಾನ್ಸ್‌ಪೋರ್ಟ್ ಅಥಾರಿಟಿ ಸಂಬಂಧವಾಗಿ ರೂಲ್ಸ್‌ಗಳು ಬಂದಿದ್ದರೂ ಯಾವಾಗ ಕೇಳಿದರೂ ಅದು ಪ್ರಿಂಟಾಗಿಲ್ಲವೆಂದು ಹೇಳುವ ಪರಿಸ್ಥಿತಿ ಬಂದಿದೆ. ಅದೇ ರೀತಿಯಾಗಿ ಈ ಅಸೆಂಬ್ಲಿಯ ಪ್ರೊಸೀಡಿಂಗ್ಸ್ ಕೂಡ ಕಾಲ ಕಾಲಕ್ಕೆ ಬರುತ್ತಿಲ್ಲ.

Mr. SPEAKER.—There is no demand for the printing of text-books under this head now. It refers only to the printing of the proceedings of the Houses of Legislature. You will have to confine yourself to that only.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಆ ವಿಷಯದಲ್ಲೂ ಕೂಡ ಪರಿಸ್ಥಿತಿ ಶೋಚನೀಯವಾಗಿದೆ. ಆಯಾ ದಿವಸದ ನಡವಳಿಕೆಗಳನ್ನು ಆಯಾದಿವಸವೇ ಕೊಡುವಂತೆ ಏರ್ಪಡಿಸತಕ್ಕದ್ದು ಈ ಅಸೆಂಬ್ಲಿ ಸೆಕ್ರೆಟೆರಿಯವರ ಕರ್ತವ್ಯ. ಈ ವಿಚಾರದಲ್ಲಿ ಅವರಿಗೆ ಬೇಕಾದ ಸೌಲಭ್ಯಗಳನ್ನು ಪ್ರೆಸ್ಸಿನಲ್ಲಿ ಒದಗಿಸಿಕೊಡಬೇಕಾದದ್ದು ಸರ್ಕಾರದವರ ಕರ್ತವ್ಯ. ಇದು ಬಹಳ ಅಗತ್ಯವಾದದ್ದು. ನಮಗೆಲ್ಲಾ ತಿಳಿದಿರುವ ಹಾಗೆ ಪಾರ್ಲಿಮೆಂಟಿನಲ್ಲಿ ಆಯಾ ದಿನದ ನಡವಳಿಕೆಗಳ ವರದಿಯನ್ನು ಮಾರನೆಯ ದಿನವೇ ಮುದ್ರಣ ಮಾಡಿಸಿ ಅಸೆಂಬ್ಲಿಯ ಸದಸ್ಯರಿಗೆ ಹಂಚುತ್ತಾರೆ. ಅದೇರೀತಿಯಾಗಿ ಇಲ್ಲಿಯೂ ಮಾಡುವುದಕ್ಕೆ ಅವಕಾಶ ಮಾಡುವುದು ಬಹಳ ನ್ಯಾಯವಾಗಿದೆ. ಆದರೆ ಈಗ ನೋಡಿದರೋ, ಎರಡು ಮೂರು ತಿಂಗಳುಗಳಾದರೂ ಪ್ರೊಸೀಡಿಂಗ್ಸ್ ಬರುವುದಿಲ್ಲ. ಇಂಥ ಪರಿಸ್ಥಿತಿಯಿರುವುದು ಬಹಳ ಅನ್ಯಾಯ. ಆದಷ್ಟು ಜಾಗ್ರತೆ ಮುದ್ರಣ ಮಾಡಿಸಿ ಮಾರನೆಯ ದಿವಸವೇ ಈ ಸಭೆಯ ನಡವಳಿಕೆಗಳು ಬರುವಂತೆ ಮಾಡುವುದು ಅಗತ್ಯವೆಂದು ಹೇಳುತ್ತೇನೆ.

3 P.M.

ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾ ಇಲಾಖೆಗಳ ಮಂತ್ರಿಗಳು).—ಸ್ವಾಮಿ, ಯಾವ ತೊಂದರೆಯನ್ನು ಈ ಸಭೆಯ ಗಮನಕ್ಕೆ ಮಾನ್ಯ ಸದಸ್ಯರು ತಂದಿದ್ದಾರೋ ಅದನ್ನು ನಿವಾರಣೆಮಾಡುವುದಕ್ಕಾಗಿಯೇ ಈ ಗ್ರಾಂಟನ್ನು ಕೇಳಿರುವುದು. ಇದೂ ಅಲ್ಲದೆ ಮುದ್ರಣಾಲಯವನ್ನು ಇನ್ನೂ ಅಭಿವೃದ್ಧಿಮಾಡಿ ಅಲ್ಲಿಗೆ ಬೇಕಾದ ಸಲಕರಣೆಗಳನ್ನು ಹೊಸದಾಗಿ ತರಿಸಬೇಕೆಂದು ಎಂಟು ಲಕ್ಷ ರೂಪಾಯಿಗಳಿಗೆ ಒಂದು ಅಂದಾಜು ಬಂದಿದೆ. ಅದು ಪರಿಶೀಲನೆಯಲ್ಲಿದೆ. ಅವರು ಗಮನಕ್ಕೆ ತಂದಿರುವ ನ್ಯೂನತೆಯನ್ನೂ ಸರಿಪಡಿಸಲು ಪ್ರಯತ್ನ ಮಾಡುತ್ತೇವೆ. ಮುಖ್ಯವಾಗಿ ಈಗ ತಂದಿರುವ ಡಿಮ್ಯಾಂಡ್ ಆವಶ್ಯಕವೆಂದು ಹೇಳಿ ಇದನ್ನು ಒಪ್ಪಿಕೊಂಡು ಖೋತಾ ಸೂಚನೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಕೇಳುತ್ತೇನೆ.

Mr. SPEAKER.—The question is:

> "That a supplementary sum not exceeding Rs. 30,920 be granted to the Government to defray the charges which will come in course of payment during the year ending 31st day of March 1954, in respect of 'Stationery and Printing'."

The motion was adopted.

Mr. SPEAKER.—The House will now rise for Lunch and meet at 3-30 P.M.

The House adjourned for Lunch at Two Minutes past Three of the Clock and reassembled at Thirty Minutes past Three of the Clock.

[Mr. SPEAKER in the Chair.]

DEMAND No. 37.—WORKING EXPENSES—IRRIGATION WORKS.

XVII. I.N.E. and D. works for which Capital Accounts are kept.

Mr. SPEAKER.—Motion moved :

" That a supplementary sum not exceeding Rs. 2,99,900 be granted to the Government to defray the charges which will come in course of payment during the year ending 31st day of March 1954, in respect of 'I.N.E.D. Works for which capital accounts are kept—Working Expenses'."

A cut motion stands in the name of Sri S. Gopala Gowda, but he is not here. So I will put the demand to vote.

The question is :

" That a supplementary sum not exceeding Rs. 2,99,900 be granted to the Government to defray the charges which will come in course of payment during the year ending 31st day of March 1954, in respect of 'I.N.E.D. Works for which capital accounts are kept—Working Expenses'."

The motion was adopted.

DEMAND No. 38.—WORKING EXPENSES—ELECTRICITY SCHEMES.

XLI. Receipts from Electricity Schemes.

Mr. SPEAKER.—Motion moved :

" That a supplementary sum not exceeding Rs. 2,12,375 be granted to the Government to defray the charges which will come in course of payment during the year ending 31st day of March 1954, in respect of 'Receipts from Electricity Schemes—Working Expenses'."

The first cut motion stands in the name of Sri M. Linganna. He is not here. Besides the subject urged for discussion in the cut motion is electrification of villages, which is different from the demand head. The second stands in the name of Sri S. Gopala Gowda. He is not here.

Sri R. ANANTARAMAN (Chamarajpet).—Mr. Speaker, Sir, last time, under the same heading, I had sent a cut motion regarding the failure on the part of the Electrical Department in not discharging their duties to see that electricity is supplied well in Bangalore City. Sir, the Hon'ble Minister and you also are aware that in Bangalore City, every day there will be failure of current once in three or four hours. This fact has been brought to the notice of the Superintendent, Power and Light, and also to the Chief Electrical Engineer. I am told by them that the machinery they are using is not in good order, or, that they are old. They say that transformers are not supplied to them. That is not a good excuse, because, we are having our own Electrical Factory. I have also paid a visit to that factory. The Minister of Industries also had been to that place. There, the workers were turning out a good supply of transformers, but they are not encouraged and the workers have adopted a go-slow policy in that department. It is so because there is a dispute pending between the labourers and the management. The Industrial Tribunal has so far not given any decision, though the case has been argued three months back. The workers say that unless the dispute is settled they are not going to work regularly and produce a good number of transformers. I do not know why, instead of encouraging workers here, Government intend getting transformers from outside. I am told it is very difficult to get transformers from America and other places. In fact those countries manufacture transformers only for their own use, and they do not like to send

transformers outside. When that is the case, there is much difficulty for getting transformers from outside. I do not know why our Government are not encouraging our own people. It is better they are paid well so as to turn out good work. Indeed, it is one of the best equipped factories. It is a bit sad that, in spite of this, we are not able to produce a good number of transformers. I request the Government, the Hon'ble Minister for Industries, to see that the dispute is settled as early as possible, so as to manufacture our own transformers.

I do not know why the Electrical Department or any other department for that matter should say that there are no transformers, that the machinery is old and they are not available, etc. I request the concerned authorities to pay attention to these and see that the biggest consumer of power, Bangalore City which pays about Rs. 85 lakhs every month, subject to correction Mr. Speaker, is paid attention to and kept satisfied. We are aware that on Sundays sometimes there will be overhauling of machinery and there will be failure of current. We can understand that. But, on other days, exactly at eight or nine current fails and the City will be without lights till midnight sometimes. I do not know why the authorities are not taking proper steps to see such things do not occur. In fact, such failures should be attended to immediately. A few months back it was being said that they were not having electricity due to shortage of rain. Now, we are having plentiful rain for production of electricity and I do not think that there could be still troubles hereafter. I request Government to see that this difficulty is removed as early as possible.

I wish to bring to the notice of Government that a sort of discrimination is existing in the charging of rates for electric power. In City, the Department charges some rate, and, in the Civil Station, a different rate is charged. When the Civil Station was a separate unit, the Department were charging a higher rate. Now that the Civil Station is merged into the City area, the rates have not been changed and the rates in different parts of Bangalore are not uniform. I request the Government to see that this defect is remedied and the people of Bangalore are assured of continuous supply of power. In fact, if the consumer does not deposit his dues within the date prescribed, the department cuts off electricity the very next day. When that is the case, I do not know why Government is not paying proper attention to satisfy the consumer's needs. I had brought a similar cut motion last time expecting better treatment and improvement in the situation in Bangalore City, but I do not find any such improvement at all. In fact, I have rung up the Superintendent, Power and Light, and the Chief Electrical Engineer, half a dozen times in this behalf, but the same difficulty still continues. I, therefore, request the authorities to pay more attention to Bangalore City.

Sri P. R. RAMAIYA (Basavangudi).-Sir, the failure of current in the City of Bangalore has become a menace to the residents of the City, because the failure has been occurring not only very often but too often. I would like to know if the department does not owe a duty to the citizens of Bangalore to inform them as to why such occurrences, I mean the failure of current, have been happening very often. When lights fail and when we try to contact the authorities sometimes, the telephone is not taken up or it would be engaged. This creates a lot of annoyance to the citizens. Nobody feels the sense of responsibility in this matter. This happens very often. This has been brought to the notice of the department by the Press in their columns and also by letters to the authorities.

Another matter which I wish to bring to the notice of the Government is—when a bulb is fused out in a public street lamp, it is the duty of the concerned man to supervise and find out which are not working properly and which are to be attended to urgently. But what happens is, though the department is informed, for days together—and I would say sometimse for more than ten days—this matter is not attended to. Anothert curious

(SRI P. R. RAMAIYA.)

thing that is happening is that bulbs in the public streets are being stolen. For days together the complaint is not heeded to and nobody turns up. This thing has been creating a good lot of hardship. Sometimes when the concerned authorities are approached, they say that the residents have to keep a watch over these lights to see that they are not stolen. This is very curious. At the dead of night you cannot expect residents to keep a watch to see that the bulbs are not stolen. I think it is the duty of the Police Department to keep a watch and see that these bulbs are not stolen. Another thing which I may be pardoned to mention here is, I am told that some dismissed officials of the electrical department are engaged in this curious act of thieving bulbs. This is a matter for the Department to investigate and see that such things do not happen. Of course, the story of failure of lights in Bangalore City is known to every one, including the Ministers. It is up to them to see that the Department shows some consideration to the people who are affected by it.

Sri M. V. RAMA RAO (Tumkur).—I wish to seek enlightenment on two points in this matter. One is in respect of item No. 1 dealt with in the explanatory note. It is said that the sum of Rs. 1,54,000 represented the value of unserviceable and obsolete materials to be written off in the accounts and the sanction to write off was accorded only at the close of 1952-53. I should be obliged if the Government would indicate to the House the nature of the materials costing this considerable sum of money which have become unserviceable and obsolete. The expression 'obsolete' in respect of these materials does not, to my mind at any rate, convey anything intelligible. I should like to understand why and how and what materials are obsolete and what materials have become unserviceable. Then, Sir, with respect to item No. 2, it is said that a sum of Rs. 58,375 represented one-fourth of the cost of the Temporary Civil Engineering Establishment continued for a period of one year. But no details have been furnished as to who are the officers and who are the other members of the Establishment maintained in respect of which these provision are made. Speaking for myself, I must confess it is not quite clear indeed why only one-fourth of the cost of the Temporary Civil Engineering Establishment is dealt with under this head. If the Hon'ble Minister will kindly explain these two points, I will be grateful to him.

Sri H. SIDDAVEERAPPA (Minister for Home and Industries).—Sir, I should like first to explain and answer the questions posed by my friend, Sri Rama Rao. Regarding item No. 1 this is the position. The unserviceable materials consist of bents, bolts, joint boxes, couplings, covers, etc., rusted threads worn out and decayed by other natural causes, insulated materials, insulator linings perished by efflux of time. These materials are returned from works after long use and remain unused for over 10 years. Hence they are treated as unserviceable. Glasswares, lamps, motors, carbon rods, springs, etc., are broken. The obsolete materials consist of transformers, relays, resistence insulators, arresters, etc., cables for old transformers, copper wire for old transformers, spare parts and other machinery which are now obsolete. The spares which were intended to be used are not in service now. The value of unserviceable and obsolete materials are to be written off from the Central Stores, Mysore Power and Light and other Stores amounting to Rs. 1,54,000. That is the explanation with regard to item No. 1. Sir, with regard to item No. 2, I am sorry, I am not in a position to give any satisfactory explanation apart from what is contained in the explanatory note itself. I think, my friend will be able to excuse me for that.

I will come to the point raised by my Hon'ble friend, Sri P. R. Ramiah. No doubt, it is true, as citizens of Bangalore, of late we have been accustomed to see almost frequent trouble with regard to supply of electric power, particularly for domestic

use. Steps will be taken to see that such frequent failures are eliminated. I shall take note of his suggestions and issue suitable instructions to the concerned Department to exert and see that all these difficulties experienced by the citizens are eliminated to the minimum. I can give him this assurance, and I hope, when I assure him that I will take note of what he has said, he will be satisfied with it. Then I come to what my Hon'ble friend, Sri Anantaraman said. . .

Sri P. R. RAMAIYA.—What about stealing of bulbs?

Sri H. SIDDAVEERAPPA.—It is no doubt true that there are some cases where these thefts are recurring very often. At any rate I will also issue instructions to the Police Department to keep a close and vigilant eye and see that they also render their service to find out and detect those kinds of offences.

Sri K. PUTTASWAMY (Sreerangapatna).—I am told that it is done by dismissed officials?

Sri H. SIDDAVEERAPPA.—I cannot say that offences are committed only by dismissed officials. There may be some cases. I am not in a position to substantiate it.

Now I go on to what my friend Anantaraman said about the working of the Electric Factory. Sir, as the House is aware, this is one of the major factories working from a very long time. Very recently, *i.e.*, on 9th July 1953, I visited the Factory and studied the various branches of its working, I also met the representatives of labour and office bearers of the Labour Association. I heard them fully. I wanted to know what exactly was the position. Sir, not only in the Electric Factory, but also in other factories owned by the Government, I have made the position very clear to the labourers, namely, so far as this Government are concerned, we never take a strictly capitalistic attitude of the whole affair. We are prepared to have a sympathetic attitude. So far as I am concerned, I have told them whoever earns more is entitled to get more and is entitled to eat more The policy is earn and eat. So far as I am concerned, if the Government get adequate return, the labour is entitled to get whatever they want That has been demonstrated and amplified by our policy in one of our major works, namely, Bhadravati Iron Works. Perhaps in no place have they given three months, bonus as we have done in Bhadravati. What is more, we have introduced production bonus scheme. I have also told them: "I will give you all facilities and incentives to produce more and you may get whatever you want; I am there to come to your aid." I told them that I also am a labourer, though not an industrial labourer but an agricultural labourer, and that I know what it is. Therefore, when they raise any question, so far as the Government are concerned, they are always prepared to consider more sympathetically any reasonable demand put forward by the Labour. This is the policy of the Government; not only have I stated it with lip-sympathy, but I have demonstrated it and shaped it in the actual working in the Bhadravati Iron Works. Sir, so far as this factory is concerned, when I went there, the labour also met me afterwards. I told them: this is the position; the case has been referred to the tribunal, the tribunal is a judicial Body; when the matter is seized of by the Industrial Tribunal, I cannot certainly interfere; when the matter is more or less *sub judice*, I cannot interfere in the matter. I told them: if you are really earnest about it either wait for the decision of the tribunal or withdraw your case and come to us. Let us sit across the table and decide what we can do. This is a matter which refers to a back-period where unfortunately according to the balance sheet of the Factory, the Factory has worked in that particular period at a loss. But whatever it is, I am not entering into the merits of the case. But so far as the Government are concerned, even today, I am prepared to state that any demand put forward by the labourers of the Electric Factory will always receive my utmost

(SRI H. SIDDAVEERAPPA.)

consideration. I even told them, now that the case has been pending before the Tribunal for a fairly long time, now after the arguments are over, the award is about to be given; therefore, it is better to wait for the decision of the Tribunal. I assured them that even after the award is given, if necessary, we may sit across the table and discuss what we can do in the matter. Therefore, if there is any feeling in the mind of the labour, I would like to assure them that so far as the Government are concerned, we are always prepared to allay their fears and come to their rescue where their demands are legitimate.

With regard to other point raised by my friend, I looked very closely into the account for a good number of years. I am very happy to say last year the working of the factory has considerably improved. The production has increased though, of course, in one or two branches, for reasons beyond the control of the factory, particularly the bakelite section, it has been rather not very profitable so far as the factory is concerned. I am also interested in seeing that the proud name of this factory is maintained. That can only be done when the management and the labour work in close liaison and closest co-operation. With that intention in view, I had been in touch with two German experts very recently. Last week, I think, they paid a visit to the Factory. I have requested them to go through the whole machinery section and see whether any improvements can be suggested therefor. I am closely in touch with the labourers of that Factory and I assure them that Government will always go to their rescue and always give heed to them provided they put their demands at the proper time and in a manner not to cause any embarrassment to the Government. With this assurance, I am sure, the labourers in the Electric Factory will not undertake any slow down programme; so far as I am concerned, I was not able to find any such thing. The production figures are really satisfactory but the percentage of absentees was really great. I ask them to look into that matter. I hope, Sir, I have explained the position to the satisfaction of my friend, Sri Anantaraman.

Sri M. V. RAMA RAO.—With regard to the value of the materials to be written off, may I take it that it does not mean that obsolete and unserviceable materials will not be sold as scrap and the realisations taken on the credit side?

Sri H. SIDDAVEERAPPA.—That will be done. Whatever is worth will be disposed of according to rules.

Mr. SPEAKER.—The question is:

"That a supplementary sum not exceeding Rs. 2,12,375 be granted to the Government to defray the charges which will come in course of payment during the year ending 31st day of March 1954, in respect of 'Receipts from Electricity Schemes—Working expenses'."

The motion was adopted.

DEMAND No. 41.—INDUSTRIAL DEVELOPMENT.

72. Capital Outlay on Industrial Development.

Mr. SPEAKER.—Motion moved:

"That a supplementary sum not exceeding Rs. 1,75,000 be granted to the Government to defray the charges which will come in course of payment during the year ending 31st day of March 1954, in respect of 'Capital Outlay on Industrial Development'."

The first cut motion stands in the name of Sri Nagappa Setty. That is unconnected with the demand. The second cut motion stands in the name of Sri S. Gopala Gowda. The cut motion has no reference to the Demand.

The question is:

"That supplementary sum not exceeding Rs. 1,75,000 be granted to the Government to defray the charges which will come in course

of payment during the year ending 31st day of March 1954, in respect of 'Capital Outlay on Industrial Development'."

The motion was adopted.

DEMAND No. 42—ELECTRICITY SCHEMES.

81-A. Capital outlay on Electricity Schemes

4 P.M.

Mr. SPEAKER.—Demand No. 42. Motion moved :

"That a supplementary sum not exceeding Rs. 16,73,825 be granted to the Government to defray the charges which will come in course of payment during the year ending 31st day of March 1954, in respect of 'Capital Outlay on Electricity Schemes'."

The first cut motion under this head stands in the name of Sri B. V. Narayana Reddy. Sri Mulka Govinda Reddy will move it.

Power supply to Bagepalli and Gudibanda Taluks for irrigation.

Sri MULKA GOVINDA REDDY (Chitaldrug).—I beg to move :

"That the demand under the head '81-A. Capital Outlay on Electricity Schemes' for Rs. 16,73,825 be reduced by Rs. 100 (to impress on the Government the urgent need of supplying power for irrigation to Bagepalli and Gudibanda Taluks in Kolar District)."

ಸ್ವಾಮಿ, ಕೋಲಾರ ಡಿಸ್ಟ್ರಿಕ್ಟಿನಲ್ಲಿ ಅತಿ ಭಯಂಕರವಾದ ಕ್ಷಾಮ ಪರಿಸ್ಥಿತಿಯಿರತಕ್ಕುದು ಬಾಗೇಪಲ್ಲಿ ಮತ್ತು ಗುಡಿಬಂಡ ತಾಲ್ಲೂಕುಗಳಲ್ಲಿ. ಈ ಎರಡು ತಾಲ್ಲೂಕುಗಳಲ್ಲೂ ಪ್ರತಿಹಳ್ಳಿಗೂ 10-15-20 ಬಾವಿಗಳಿವೆ. ಆದ್ದರಿಂದ ಅಲ್ಲಿರತಕ್ಕ ಕ್ಷಾಮ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೂ ಮತ್ತು ಆಹಾರ ಸಮಸ್ಯೆಯನ್ನು ಪರಿಹರಿಸುವುದಕ್ಕೂ ಅಲ್ಲಿನ ರೈತರಿಗೆ ಅನುಕೂಲವಾಗುವಂತೆ ನಿರಾವರಿ ಸಾಗುವಳಿಗೆ ವಿದ್ಯುಚ್ಛಕ್ತಿಯ ಸಹಾಯವನ್ನೊದಗಿಸುವುದು ನ್ಯಾಯ. ಎಲ್ಲಿ ಎಲೆಕ್ಟ್ರಿಕ್ ಪಂಪುಗಳ ಆಗತ್ಯವಿದೆಯೋ ಅಲ್ಲಿಗೆ ಮೊದಲು ಕೊಡತಕ್ಕುದು ಸರ್ಕಾರದ ಆದ್ಯಕರ್ತವ್ಯ. ಬಾಗೇಪಲ್ಲಿ ಗುಡಿಬಂಡ ತಾಲ್ಲೂಕುಗಳಲ್ಲಿ ಅನೇಕ ಸಾರಿ ಈ ಬಾವಿಗಳಿಗೆ ಪವರ್ ಕೊಡಿ ಎಂದು ಹೇಳುತ್ತಿದ್ದರೂ ಕೂಡ ಯಾವುದೋ ಕಾರಣದಿಂದ ನೀವು ಕೊಡುತ್ತಿಲ್ಲ. ಈ ಬಗ್ಗೆ ಈಚೆಗೆ ನಾನು ಚೀಫ್ ಎಲೆಕ್ಟ್ರಿಕಲ್ ಎಂಜಿನಿಯರನ್ನು ಕೇಳಿದ್ದರಲ್ಲಿ ಅವರು ತಿಳಿಸಿದ್ದಾರೆ (ಒಂದು ಕಾಗದವನ್ನೂ ಕೂಡ ಬರೆದಿದ್ದಾರೆ) ಏನೆಂದರೆ, ಎಸ್ಟಿಮೇಟ್ ಮಾಡಿಸಿದ್ದರಲ್ಲಿ ಒಂದು ಹಾರ್ಸ್ ಪವರಿಗೆ 1,000 ರೂಪಾಯಿಗಳಿಗೆ ಮೇಲ್ಪಟ್ಟು 1,300 ರೂಪಾಯಿಗಳವರೆಗೂ ಹೋಗುತ್ತದೆ. ಅದಕ್ಕಾಗಿ ಹೆಚ್ಚಿಗೆ ಖರ್ಚಾಗುವುದರಿಂದ ಅದನ್ನು ಮಾಡಿಸಿಕೊಡುವುದಕ್ಕಾಗುವುದಿಲ್ಲವೆಂದು ಬರೆದಿದ್ದಾರೆ. ಇನ್ನೂ ಹೆಚ್ಚಿಗೆ ರೈತರಿಗೆ ಪ್ರೋತ್ಸಾಹಿಸಿ ಅವರೂ ವಿದ್ಯುಚ್ಛಕ್ತಿಯನ್ನು ತೆಗೆದುಕೊಳ್ಳಲು ಒಪ್ಪಿ ಮುಚ್ಚಳಿಕೆ ಬರೆದು ಕೊಡಲು ಒಪ್ಪಿ ಅರ್ಜಿಹಾಕುವುದಾದರೆ ಕೊಡುವುದಕ್ಕೆ ಸಾಧ್ಯವಾಗುತ್ತದೆಂದು ಅವರು ತಿಳಿಸಿದ್ದಾರೆ. ಅವರು ಹೇಳಿದಂತೆ ಹೆಚ್ಚಿಗೆ ರೈತರುಗಳಿಂದ ಅರ್ಜಿಹಾಕಿಸುವುದಕ್ಕೆ ಪ್ರಯತ್ನವೇನೋ ಮಾಡಬಹುದು. ಆದರೆ ಈಗಿನ ಆರ್ಥಿಕ ಸ್ಥಿತಿಯಲ್ಲಿ ರೈತರುಗಳು ಪಂಪು ಮೋಟಾರಿಗೂ ಹಣಕೊಡುವುದಕ್ಕೆ ಕೈಯಲ್ಲಿ ಸಾಧವಿಲ್ಲದೆ ಅರ್ಜಿಹಾಕುವುದಕ್ಕೇ ಹಿಂಜರಿಯುತ್ತಿದ್ದಾರೆ. ಎರಡನೆಯದಾಗಿ, ಕ್ಷಾಮ ಪರಿಸ್ಥಿತಿಯಿರತಕ್ಕ ಇಂಥ ಪ್ರದೇಶಗಳಲ್ಲಿ ಒಂದು ಸಾವಿರ ರೂಪಾಯಿಗೆ ಒಂದು ಹಾರ್ಸ್‌ಪವರ್ ಕೊಡುವಂತೆ ಇರಬೇಕೆಂದು ಕಟ್ಟುನಿಟ್ಟಾಗಿ ರೂಲ್ ಮಾಡಿದರೆ ಅಲ್ಲಿನ ಜನರಿಗೆ. ಯಾವ ರೀತಿಯಲ್ಲೂ ಸಹಾಯ ಮಾಡಿದಂತಾಗುವುದಿಲ್ಲ. ಆದ್ದರಿಂದ ಇಂಥ ಕ್ಷಾಮ ಪರಿಸ್ಥಿತಿಯಿರುವ ಪ್ರದೇಶಗಳ ವಿಷಯದಲ್ಲಿ ಸ್ವಲ್ಪ ಮುಂದೆ ಬಂದು ಅವರಿಗೆ ಸಹಾಯಮಾಡುವುದು ನಿಮ್ಮ ಆದ್ಯಕರ್ತವ್ಯ. ಇವೊತ್ತಿನ ದಿವಸದವರೆಗೂ ಅಲ್ಲಿ ಮಳೆಯೇ ಆಗಿಲ್ಲವೆಂಬುದು ಸರ್ಕಾರದ ಗಮನಕ್ಕೂ ಬಂದಿದೆ. ಇಂಥ ಸಂದರ್ಭದಲ್ಲಿ ಈ ಎರಡು ತಾಲ್ಲೂಕುಗಳಿಗೆ ಹೇರಳವಾಗಿ ಪವರ್ ಕೊಟ್ಟರೆ ಅನುಕೂಲವಾಗುತ್ತದೆಂದು ಹೇಳಿ ಈ ನಿರ್ಣಯವನ್ನು ಸಭೆಯ ಮುಂದಿಡುತ್ತೇನೆ.

Mr. SPEAKER.—Cut motion moved :

"That the demand be reduced by Rs. 100."

*ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು).—ಸ್ವಾಮಿ, ಕೋಲಾರ ಡಿಸ್ಟ್ರಿಕ್ಟ್ ಡಿಸ್ಟ್ರೆಸ್‌ಗೆ ಒಳಗಾಗಿರುವ ಪ್ರದೇಶವಾಗಿರುವುದರಿಂದ 'lift irrigation'ಗಾಗಿ, ವಿದ್ಯುಚ್ಛಕ್ತಿ ಒದಗಿಸಬೇಕೆಂಬುದೇ ಸರ್ಕಾರದವರ ನೀತಿಯಾಗಿದೆ. ಬಾಗೇಪಲ್ಲಿ ಮತ್ತು ಗುಡಿಬಂಡಾ ತಾಲ್ಲೂಕುಗಳಲ್ಲಿ 148 ಇರಿಗೇಷನ್ ಪಂಪುಗಳನ್ನು ಹಾಕಬೇಕೆಂದು ಹೇಳಿ 9,98,000 ರೂಪಾಯಿಗಳಿಗೆ ಒಂದು 'detail survey' ಆಗಿದೆ. ಆದರೆ, ತಾವು ಆಗಲೇ ಹೇಳಿದಹಾಗೆ, ಸರ್ಕಾರದವರು ಪಂಪುಗಳನ್ನು ಹಾಕಿಕೊಡಬೇಕಾದರೆ, ಅದು ಸಾಮಾನ್ಯವಾಗಿ ಲಾಭದಾಯಕವಾಗಿದ್ದು ಹಾರ್ಸ್‌ಪವರಿಗೆ ಒಂದು ಸಾವಿರ ರೂಪಾಯಿನಂತೆ work ಆಗುವಂತಿರಬೇಕೆಂದು ಒಂದು ನಿಯಮವನ್ನೂ ಇಟ್ಟುಕೊಂಡಿದ್ದಾರೆ. ಹೀಗಿರುವಲ್ಲಿ ಈ ಕೆಲಸ 1,400 ರೂಪಾಯಿಗಳಿಗೆ work ಆಗುತ್ತದೆ. ಆದ್ದರಿಂದ ಸರ್ಕಾರದವರು ಏನು ಒಂದು ನೀತಿಯನ್ನಿಟ್ಟುಕೊಂಡಿದ್ದಾರೋ ಅದನ್ನು ಸಂದರ್ಭಾನುಸಾರ, ಒಂದುವೇಳೆ ಒಂದಾನೊಂದು ಪ್ರದೇಶದಲ್ಲಿ 50 ಅಥವಾ 100 ರೂಪಾಯಿಗಳು ಹೆಚ್ಚಾದರೂ ಯೋಚನೆಮಾಡದೆ ಅದನ್ನು ಕೈಕೊಳ್ಳುತ್ತಲಿದ್ದಾರೆ. ಹಾಗಿಲ್ಲದೆ ಆ ನೀತಿ ಎಂದಿಗೂ ಬದಲಾಯಿಸತಕ್ಕುದ್ದಲ್ಲವೆಂದೇನೂ ಇಟ್ಟುಕೊಂಡು ಹೋಗುತ್ತಿಲ್ಲ.

(ಶ್ರೀ ಎಚ್. ಸಿದ್ಧವೀರಪ್ಪ.)

ಹಾಗಿದ್ದರೂ, ಇಲ್ಲಿ ಖರ್ಚು ವೆಚ್ಚಗಳನ್ನು ನೋಡಿದ್ದರಲ್ಲಿ ಖರ್ಚು ಸ್ವಲ್ಪ ಮಟ್ಟಿಗೆ ಬಹಳ ಹೆಚ್ಚಾಯಿತೆಂಬು ಯೋಚನೆಮಾಡಬೇಕಾಗಿದೆ. ಅಲ್ಲದೆ ಇತ್ತೀಚೆಗೆ ತಾನೆ ಬಾಗೇಪಲ್ಲಿ ಗುಡಿಬಂಡೆ ತಾಲ್ಲೂಕುಗಳಿಗೆ ವಿದ್ಯುಚ್ಛಕ್ತಿ ಕೊಟ್ಟಿದೆ. ಲೈನ್ ಹಾಕಿರುವುದೇ ಈಗೀಗ. ಅದ್ದರಿಂದ ಇನ್ನುಮುಂದೆ ಪಂಪುಗಳನ್ನು ಕೊಡುವ ವಿಷಯವನ್ನು ಯೋಚನೆಮಾಡುವವರಾಗಿದ್ದೇವೆ. ಖರ್ಚು 1,100 ರೂಪಾಯಿಗಳವರೆಗೂ ಹೋಗುತ್ತದೆಂಬ ದೃಷ್ಟಿಯಿಂದ ಇದನ್ನು ಬಿಡುವುದು ಸರಿಯಲ್ಲವೆಂಬದನ್ನು ನಾನೂ ಒಪ್ಪುತ್ತೇನೆ.

ಆದರೆ ಕೋಲಾರ ಜಿಲ್ಲೆಯಲ್ಲಿ ಇನ್ನೊಂದು ಕಷ್ಟವೂ ಇದೆ. ಅಲ್ಲೀಗ 25 ಸೈಕಲ್ ಕರೆಂಟ್ ಇರುವುದರಿಂದ ಹೋದವರ್ಷವೂ ಕೂಡ ಎಷ್ಟು ಹಣ ಆ ಭಾಗಕ್ಕೆ ಒದಗಿಸಿದ್ದೇವೋ ಅಷ್ಟು ಹಣವನ್ನು ಕೂಡ ಪೂರಾ ಖರ್ಚು ಮಾಡುವುದಕ್ಕಾಗಿಲ್ಲ. ಏಕೆಂದರೆ 25 ಸೈಕಲ್ ಕರೆಂಟು ಯಾವ ಪ್ರಾಜೆಕ್ಟಿನಿಂದ ಬರುತ್ತಿದೆಯೆಂಬುದು ತಮಗೇ ಗೊತ್ತಿದೆ. ಕೆಲವು ಕೈಗಾರಿಕಾ ಕಾರ್ಖಾನೆಗಳಿಗೆ ಕೂಡ 100%ರಷ್ಟು ವಿದ್ಯುಚ್ಛಕ್ತಿಯನ್ನು cut ಮಾಡಬೇಕಾಗಿ ಬಂದಿತ್ತು. ಈ ಕಷ್ಟವನ್ನು ತಪ್ಪಿಸುವುದಕ್ಕಾಗಿ frequency conversion ಕೆಲಸ ತ್ವರಿತವಾಗಿ ಈಗ ನಡೆಯುತ್ತಿದೆ. ತಮಗೇ ಗೊತ್ತಿರುವ ಹಾಗೆ 50 ಲಕ್ಷ ರೂಪಾಯಿಗಳನ್ನು ಇಂಡಿಯಾ ಸರ್ಕಾರದವರು ಇದಕ್ಕಾಗಿಯೇ ಮಂಜೂರು ಮಾಡಿದ್ದಾರೆ. ಅಷ್ಟೇ ಅಲ್ಲ. ಈ ಕೆಲಸ ಬಹಳ ತ್ವರಿತವಾಗಿ ನಡೆಯಬೇಕೆಂಬ ದೃಷ್ಟಿಯಿಂದ ಇದಕ್ಕಾಗಿಯೇ ಬೇರೊಂದು ಸಿಬ್ಬಂದಿಯಿಟ್ಟು, ಒಬ್ಬ ಸೂಪರಿಂಟೆಂಡೆಂಟರನ್ನೂ ಸ್ಪೆಷಲ್ ಆಫೀಸರಾಗಿ ನೇಮಿಸಿರುವುದಲ್ಲದೆ ಒಬ್ಬ ರೆವೆನ್ಯೂ ಆಫೀಸರನ್ನೂ ಅವರ ಸಹಾಯಕ್ಕಾಗಿ ಕೊಟ್ಟಿದ್ದೇವೆ. ರೆವೆನ್ಯೂ ಆಫೀಸರನ್ನು ಕೊಟ್ಟಿರುವ ಉದ್ದೇಶವೇನೆಂದರೆ, ಅಲ್ಲಿ ಲೈನ್ ಹಾಕಬೇಕಾದರೆ ರೈತರು ಮುಚ್ಚಳಿಕೆ ಮುಂತಾದುವುಗಳನ್ನು ಕೊಡುವುದಕ್ಕೆ ತಡಮಾಡಬಹುದು ; ಅದಕ್ಕೊಬ್ಬರು ರೆವೆನ್ಯೂ ಆಫೀಸರೇ ಇದ್ದರೆ, ಮುಚ್ಚಳಿಕೆ ಮುಂತಾದುವುಗಳನ್ನು ಬೇಗ ಬೇಗ, More or less on war footing, ಕೂಡಲೆ ಮಾಡಿಸಿಕೊಡಲು ಅನುಕೂಲವಾಗುತ್ತದೆಂದು ರೆವೆನ್ಯೂ ಆಫೀಸರನ್ನೂ ಅವರ ಜೊತೆಗೆ ನೇಮಿಸಿದ್ದೇವೆ. ಅವರು ಯಾವ ಲೈನ್ ಹಾಕುತ್ತಿದ್ದಾರೋ ಅಲ್ಲಿ ಯಾವ ಮುಚ್ಚಳಿಕೆ ಮಾಡಿಸಿಕೊಡಬೇಕು, ಜನರು ಯಾವ ರೀತಿ ಅರ್ಜಿಕೊಡಬೇಕು, ಯಾವ ರೀತಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬದನ್ನು ತೋರಿಸಿಕೊಡುತ್ತಾರೆ. ಈಗ ಇದರಂತೆ ಕೆಲಸ ನಡೆಯುತ್ತಿದೆ. ಇಷ್ಟೇ ಅಲ್ಲ. ಈ 50 ಲಕ್ಷ ರೂಪಾಯಿಗಳನ್ನು ಈ ಆರು ತಿಂಗಳಲ್ಲೇ ಖರ್ಚುಮಾಡಿದರೂ ಇಂಡಿಯಾ ಸರ್ಕಾರದವರು ಇನ್ನೂ 50 ಲಕ್ಷ ರೂಪಾಯಿಗಳನ್ನು ಇದೇ ಸಾಲನಲ್ಲಿ ಲಿಫ್ಟ್ ಇರಿಗೇಷನ್ ಬಗ್ಗೆ ಒದಗಿಸಿಕೊಡುತ್ತಾರೆಂಬ ಭರವಸೆಯಿದೆ. ಈ ರೀತಿ lift irrigation by electricity ಯನ್ನು ಕೈಕೊಳ್ಳುವಂತೆ ಮಾಡಬೇಕೆಂಬ ಉದ್ದೇಶ ಮತ್ತು ಆಸೆ ಇಂಡಿಯಾ ಸರ್ಕಾರದವರಿಗಿದೆಯೆಂದು ನನಗೆ ಗೊತ್ತಿದೆ. ಆದ್ದರಿಂದ ಕೆಲಸ ತ್ವರಿತವಾಗಿ ನಡೆಯಬೇಕು, ಅಷ್ಟೆ.

ಇದೇ ಸಂದರ್ಭದಲ್ಲಿ ಒಂದು ವಿಷಯ ಹೇಳುವುದಾದರೆ, ಈ ವರ್ಷ, 1952-53ನೆಯ ಸಾಲಿನಲ್ಲಿ ಎಷ್ಟು ಹಣವನ್ನು ಇದಕ್ಕಾಗಿ ಮೀಸಲಾಗಿಟ್ಟಿದ್ದೇವೋ ಅಷ್ಟನ್ನೂ ಕೂಡ ಈ official year ಆಗುವುದರೊಳಗೇ ಖರ್ಚುಮಾಡಲಾಗಿದೆ. ಜೊತೆಗೆ ಇನ್ನೂ ಒಂದೆರಡು ಲಕ್ಷ ಹೆಚ್ಚಿಗೆ ಖರ್ಚಾಗಿದೆಯೆಂದೇ ಹೇಳಬಹುದು ಲ್ಯಾಪ್ಸ್ ಸ್ವಲ್ಪವೂ ಆಗಿಲ್ಲವೆಂದು ಈ ಸಭೆಯಲ್ಲಿ ಅರಿಕೆ ಮಾಡಿಕೊಳ್ಳುವುದಕ್ಕೆ ನನಗೆ ಸಂತೋಷವಾಗುತ್ತದೆ.

ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಎಲೆಕ್ಟ್ರಿಕ್ ಲೈನನ್ನು ಕೊಟ್ಟರೂ, ಅನೇಕರು ಆ ಲೈನನ್ನು ತೆಗೆದುಕೊಂಡುಹೋಗಿ ಎಷ್ಟರ ಮಟ್ಟಿಗೆ ಉಪಯೋಗಿಸಿಕೊಳ್ಳಬಹುದೋ ಅಷ್ಟರ ಮಟ್ಟಿಗೆ ಉಪಯೋಗಿಸಿಕೊಳ್ಳುವುದಕ್ಕೆ ನಮ್ಮ ರೈತರಿಗೆ ಶಕ್ತಿಯಿಲ್ಲವೆಂಬುದೂ ನಮಗೆ ಗೊತ್ತಿದೆ. ಏಕೆಂದರೆ ಇದು ಡಿಸ್ಟ್ರೆಸ್ ಏರಿಯಾ. ಇದನ್ನೂ ದೃಷ್ಟಿಯಲ್ಲಿಟ್ಟುಕೊಂಡು ಸರ್ಕಾರದವರು ಒಂದು ಯೋಚನೆಮಾಡುತ್ತಿದ್ದೇವೆ. ಏನೆಂದರೆ : ಎಲೆಕ್ಟ್ರಿಸಿಟಿ ಎಲ್ಲೆಲ್ಲಿ ತೆಗೆದುಕೊಂಡು ಹೋಗುತ್ತೇವೆಯೋ ಅಲ್ಲೆಲ್ಲಾ, G. M. F. ಗ್ರಾಂಟ್ಸಿನಿಂದ, ಆ ವಿದ್ಯುಚ್ಛಕ್ತಿಯನ್ನು service ಮಾಡಿಸುವುದಕ್ಕಾಗಿ ಯಾವ ಜಮೀನಿನಲ್ಲಿ ನೀರು ಬರುತ್ತದೆಂದು ಗೊತ್ತಾಗುತ್ತದೋ ಅಲ್ಲಿ ಆ ಜಮೀನಿನವರಿಂದ ಮುಚ್ಚಳಿಕೆ ತೆಗೆದುಕೊಂಡು ನಾವೇ ಮೋಟಾರ್ ಹಾಕಿಸಿಕೊಟ್ಟು, ಪಂಪಿಟ್ಟು ನೀರನ್ನೊದಗಿಸಿಕೊಟ್ಟು, ಆ ಹಣವನ್ನು ಸುಲಭವಾದ ಕಂತಿನ ರೂಪದಲ್ಲಿ ತೆಗೆದುಕೊಳ್ಳಬೇಕಾದದ್ದು ಅತ್ಯಾವಶ್ಯಕವೆಂದು ಭಾವಿಸಿದ್ದೇವೆ. ಇಲ್ಲದಿದ್ದರೆ ಏನಾಗುತ್ತದೆಂದರೆ, ಅನೇಕ ಕಡೆ ನಾವು 2-3 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಲೈನ್ ಹಾಕಿಸಿಕೊಟ್ಟರೂ, ಆ ಪ್ರದೇಶದಲ್ಲಿ 100 ಜನರಿಗೆ ಪ್ರಯೋಜನವಾಗುವ ಹಾಗಿದ್ದರೂ 2-3 ಜನರಿಗೆ ಮಾತ್ರ ಅದನ್ನು ಉಪಯೋಗಿಸಿಕೊಳ್ಳಲು ಶಕ್ತಿಯಿರುತ್ತದೆ ಬಾಕಿಯವರಿಗೆ ಸಾಮಾನ್ಯವಾಗಿ ನಾವು ಕೇಳುವ 100 ರೂಪಾಯಿಗಳ ಡಿಪಾಜಿಟ್ ಹಣವನ್ನು ಕೊಡುವುದಕ್ಕೆ ಕೂಡ ಕಷ್ಟವಾಗಿರುತ್ತದೆ. ಈ ದೃಷ್ಟಿಯಿಂದ ನಾವು ಹಣ ಖರ್ಚು ಮಾಡುವ ಕಡೆ ಅದರಿಂದ maximum benefit ತೆಗೆದುಕೊಳ್ಳುವ ದೃಷ್ಟಿಯಿಂದ, ನಾನು ಮೊದಲೇ ಹೇಳಿದಂತೆ, ಒಂದು ಹೊಸ ವಿಧಾನವನ್ನು ಜಾರಿಗೆ ತರಬೇಕೆಂದು ಆಲೋಚನೆ ಮಾಡುತ್ತಿದ್ದೇವೆ. ಈ ಸ್ಕೀಮು ಜಯಪ್ರದವಾಗಿ ಅದರಿಂದ ದೇಶದ ಉತ್ಪತ್ತಿ ಜಾಸ್ತಿಯಾಗಬೇಕೆಂದು ಯಾವ ಆಸೆ ಮಾನ್ಯ ಸದಸ್ಯರಿಗಿದೆಯೋ ಅದೇ ಆಸೆ ಸರ್ಕಾರದವರಿಗೂ ಇದೆ. ಆದ್ದರಿಂದ ಈ ಭರವಸೆಯ ಮೇಲೆ ತಾವು ತೃಪ್ತರಾಗಿ ಈ ಖೋತಾ ನಿರ್ಣಯವನ್ನು ವಾಪಸು ತೆಗೆದುಕೊಳ್ಳುತ್ತೀರೆಂದು ನಂಬಿದ್ದೇನೆ.

Sri MULKA GOVINDA REDDY.—I seek the leave of the House to withdraw the cut motion.

The cut motion was, by leave, withdrawn.

Mr. SPEAKER.—The next cut motion is in the name of Sri Mulka Govinda Reddy. There is also cut motion No. 42 in his name. One of them may be moved.

Power supply to certain places in Hiriyur and Challakere Taluks.

Sri MULKA GOVINDA REDDY.—I beg to move :

"That the demand under the head '81-A. Capital Outlay on

Electricity Schemes for Rs.16,73,825 be reduced by Rs. 100 (to urge on the Government to sanction power supply for irrigation to Godabanal, Sondekola, Bangarakkanalli, Malapanahalli, in Hiriyur Taluk, Doddaullarthi in Challakere Taluk.)''

ಸ್ವಾಮಿ, ನಾನು ಹಿಂದೆಯೇ ಹೇಳಿದಂತೆ ಚಿತ್ರದುರ್ಗ ಕ್ಷಾಮ ಪ್ರದೇಶವೆಂಬುದು ಸರ್ಕಾರದವರಿಗೇ ಗೊತ್ತಿದೆ. ನಾನು ಮೇಲೆ ಹೇಳಿದ ಎಲ್ಲದರ ವಿಷಯದಲ್ಲೂ ನೂರಕ್ಕೆ ೨೦ರ ವಿಷಯದಲ್ಲಿ ಎಸ್ಟಿಮೇಟ್ ತಯಾರಾಗಿ ಈಗ ಅವುಗಳನ್ನು ಸರ್ಕಾರದವರ ಮಂಜೂರಾತಿಗಾಗಿ ಕಳುಹಿಸಿಕೊಟ್ಟಿದ್ದಾರೆಂದು ತಿಳಿದು ಬಂದಿದೆ. ಇವುಗಳನ್ನು ಮಾಡಿಸಿಕೊಡುವುದು ಬಹಳ ಅಗತ್ಯವಾಗಿದೆ. ಮತ್ತು ಇವುಗಳ ಸಂಬಂಧವಾಗಿ ಎಲ್ಲಾ ವಿಷಯಗಳೂ ಮಾನ್ಯ ಗೃಹ ಮಂತ್ರಿಗಳಿಗೆ ಗೊತ್ತೇ ಇದೆ. ಆದ್ದರಿಂದ ತಕ್ಷಣವೇ ಇವುಗಳಿಗೆ ಮಂಜೂರಾತಿಯಿತ್ತು ಬೇಗ ಕೆಲಸವನ್ನು ಮಾಡಿಸಿ ಕೊಡಬೇಕೆಂದು ಹೇಳಿ ಈ ಖೋತಾ ನಿರ್ಣಯವನ್ನು ಸಭೆಯ ಮುಂದಿಡುತ್ತೇನೆ.

Mr. SPEAKER.—Cut motion moved:

"That the demand be reduced by Rs. 100."

ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ಸದಸ್ಯರು ಹೇಳಿದ ಹಾಗೆ ಈ 13 ಜಾಗಗಳ ಪೈಕಿ ಈಗಾಗಲೇ 6 ಜಾಗಗಳ ವಿಷಯದಲ್ಲಿ ಎಸ್ಟಿಮೇಟ್ ತಯಾರಾಗಿ ಇನ್ನೇನು ಮಂಜೂರಾಗುವ ಸ್ಟೇಜಿನಲ್ಲಿದೆ. ಬಾಕಿ ಜಾಗಗಳಲ್ಲಿ, keeping in view the economy of the unit, ಕೆಲಸ ಮಾಡುತ್ತಿದ್ದೇವೆ. ಇದರ ಮೇಲೆ ಈಗಾಗಲೇ ಚಳ್ಳಕೆರೆ ತಾಲ್ಲೂಕಿನಲ್ಲಿ 160 ಪಂಪುಗಳು ಸರ್ವಿಸ್ಸಿನಲ್ಲಿವೆ. ಬಾಕಿ ಕಡೆಯೂ ಮಾಡುತ್ತಿದೆ. ಎಲ್ಲೆಲ್ಲಿ ಮಾಡಬೇಕು, ಎಷ್ಟು ಮಟ್ಟಿಗೆ ಮಾಡಬೇಕು, ಎಲ್ಲಿ ಸಾಧ್ಯವೆಂಬುದನ್ನು ಅಧಿಕಾರಿಗಳು ಹೋಗಿ ತನಿಖೆ ಮಾಡುತ್ತಾರೆ. ಅವರಿಗೆ ಸೂಕ್ತ ರೀತಿಯಲ್ಲಿ instructions ಕೊಡಲಾಗುತ್ತದೆ. ಈ ಭರವಸೆಯ ಮೇಲೆ ಮಾನ್ಯ ಸದಸ್ಯರು ತಮ್ಮ ನಿರ್ಣಯವನ್ನು ವಾಪಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

Sri MULKA GOVINDA REDDY.—I seek leave to withdraw my cut motion.

The cut motion was, by leave, withdrawn.

Completion of irrigation wells and supply of irrigation pumps in Malavalli Tuluk.

Sri M. CHIKKALINGIAH.—(Malavalli Scheduled Castes).—Sir, I beg to move:

"That the demand under the head '81-A, Capital Outlay on Electricity Schemes' for Rs. 16,73,825 be reduced by Rs 100 (to raise a debate on the urgency of granting funds to complete the irrigation wells and to supply irrigation pumping sets in Malavalli taluk."

ಸ್ವಾಮಿ, ಈ ಖೋತಾ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತಾ ಎರಡು ಮೂರು ವಿಷಯಗಳನ್ನೂ ಸಭೆಯ ಮುಂದಿಡುತ್ತೇನೆ. ಇದುವರೆಗೂ ಸರ್ಕಾರದವರು ಬಹಳ ಸಹಾನುಭೂತಿಯಿಂದ ಡಿಸ್ಟ್ರೆಸ್ ಪ್ರದೇಶಗಳಿಗೆ ಹೆಚ್ಚು ಗಮನಕೊಟ್ಟಿದ್ದರು. ಅನೇಕ ವರ್ಷಗಳಿಂದಲೂ ಮಂಡ್ಯ ಜಿಲ್ಲೆಯವರು ಈ ವಿಷಯವನ್ನು ಕೇಳುತ್ತಿರಲಿಲ್ಲ, ಇದಕ್ಕೆ ಕಾರಣವೇನೆಂದರೆ ನಾವು ವಿಶ್ವೇಶ್ವರಯ್ಯ ನಾಲೆಯನ್ನು ನಂಬಿಕೊಂಡು ವರ್ಷ ವರ್ಷವೂ ತರೀ ವ್ಯವಸಾಯ ಮಾಡುತ್ತಿದ್ದು, ಇವನ್ನೇ ನಂಬಿಕೊಂಡಿದ್ದೆವು. ಆದರೆ ಎರಡು ಮೂರು ವರ್ಷಗಳಿಂದ ಅಲ್ಲಿ ಸಾಕಷ್ಟು ನೀರಿಲ್ಲದೆ ಹತ್ತು ಸಾವಿರ ಎಕರೆವರೆಗೆ ಜಮೀನಿನಲ್ಲಿ ತರೀ ಬೆಳೆಯೂ ಇಲ್ಲ ಖುಷ್ಕಿ ಬೆಳೆಯೂ ಇಲ್ಲವಾಗಿದೆ. ಇದರಿಂದ ರೈತರು ಬಹಳ ತೊಂದರೆ ಪಟ್ಟಿದ್ದಾರೆ. ಹಣವಿಲ್ಲವೆಂಬ ಕಾರಣದ ಮೇಲೆ ಸರ್ಕಾರದವರು ನಮ್ಮ ಕಷ್ಟವನ್ನು ಕೇಳಿಲ್ಲ. ಫೋರ್ಡ್ ಫೌಂಡೇಷನ್ ಯೋಜನೆಯನ್ನು ತೆರೆಯಲಾಗಿ, ಆ ಯೋಜನೆಗೆ ಸಂಬಂಧಪಟ್ಟ ಅಧಿಕಾರಿಗಳು ಆ ಪ್ರದೇಶದ ಎಲ್ಲ ಸ್ಥಳಗಳನ್ನೂ ಸುತ್ತಿ ನೋಡಿ ನೀರಿಗೆ ಎಲ್ಲೆಲ್ಲಿ ಸೌಕರ್ಯವಿದೆಯೆಂಬುದನ್ನು ಪರೀಕ್ಷಿಸಿ ಅಲ್ಲಿ 25-30 ಇರಿಗೇಷನ್ ವೆಲ್ಸ್ ತೆಗೆಸಿದ್ದಾರೆ. ಅಲ್ಲಿನ ರೈತರು ಸಬ್ಸಿಡಿ ಮತ್ತು ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದು ಅರ್ಜಿಹಾಕಿಕೊಂಡಿದ್ದಾರೆ. ಅವರಿಗೆ ಸಹಾಯವನ್ನೊದಗಿಸಬೇಕಾಗಿದೆ.

ನಮ್ಮ ತಾಲ್ಲೂಕಿನಲ್ಲಿ ಶಿಂಷಾ ನದಿಯ ನೀರು ಸುಮ್ಮನೆ ಹರಿದು ಹೋಗುತ್ತಿದೆ. ಇದರಿಂದ ಯಾವ ಪ್ರಯೋಜನವನ್ನೂ ಪಡೆಯುತ್ತಿಲ್ಲ. ಈ ವಿಷಯವನ್ನು ಸರ್ಕಾರದ ಮುಂದಿಡಲಾಗಿ, ಹಿಂದಿನ ಸರ್ಕಾರದವರು ಹಲಗೂರು ಹೋಬಳಿ ಮಾರಗೌಡನ ಹಳ್ಳಿಯ ಹತ್ತಿರ Lift Irrigation Project ಮೂಲಕ 410 ಎಕರೆಗಳನ್ನು ನೀರಾವರಿಗೆ ತರಬೇಕೆಂದು ಮಂಜೂರು ಮಾಡಿದರು. ಆದರೆ, ವಿಷಾದದಿಂದ ಹೇಳಬೇಕಾಗಿದೆ, ಈಗಿನ ಸರ್ಕಾರದವರು ಏನೋ ಕಾರಣದಿಂದ ಅದಕ್ಕೆ ಒಂದು ತೊಟ್ಟು 'ಸೀತಾರಾಂ' ಹಾಕಿ ನಿಲ್ಲಿಸಿದ್ದಾರೆ. ಈ ವಿಚಾರವನ್ನು ಈಗಾಗಲೇ ಒಂದೆರಡುಸಾರಿ ಸರ್ಕಾರದಲ್ಲಿ ಮನವಿಮಾಡಿಕೊಂಡಿದ್ದೇವೆ, ಆಹಾರ ಮಂತ್ರಿಗಳಲ್ಲಿ ಹೇಳಿದುದಕ್ಕೆ ಅವರು ಹೊಸ ಯೋಜನೆಯನ್ನು ಮಾಡಿ ಈ ಕೆಲಸವನ್ನು ಕೈಕೊಳ್ಳುತ್ತೇವೆಂದು ಭರವಸೆ ಕೊಟ್ಟಿದ್ದಾರೆ. ಹೊಸದಾಗಿ ಸಿಬ್ಬಂದಿಯನ್ನು ಕೂಡ ಮಂಜೂರು ಮಾಡಿದ್ದಾರೆಂದು ಕೇಳಿದ್ದೇನೆ. ಆದಷ್ಟು ಜಾಗ್ರತೆ ಶಿಂಷಾ ನದಿಯ ನೀರಿನಿಂದ ಅನುಕೂಲವಾಗುವಹಾಗೆ ಒಂದು ಯೋಜನೆಮಾಡಿ ನಮ್ಮ ತಾಲ್ಲೂಕಿಗೆ ಸಹಾಯಮಾಡಬೇಕು. ಅಲ್ಲದೆ ಅಲ್ಲಿ 25-30 ನೀರಾವರಿ ಬಾವಿಗಳನ್ನು ಮಾಡಿಕೊಂಡು ಸಬ್‌ಸಿಡಿಗಾಗಿ ಕಾದಿದ್ದಾರೆ. ಆದಷ್ಟು ಜಾಗ್ರತೆ ಮಂಜೂರುಮಾಡಿ ಸಹಾಯಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸಭೆಯವರು ಈ ಖೋತಾ ನಿರ್ಣಯವನ್ನೊಪ್ಪುತ್ತಾರೆಂದು ನಂಬಿದ್ದೇನೆ.

Mr. SPEAKER.—Cut motion moved:

"That the demand be reduced by Rs. 100."

*ಶ್ರೀ ಎಚ್. ಸಿದ್ದವೀರಪ್ಪ.—ಸ್ವಾಮಿ, ಮಳವಳ್ಳಿ ತಾಲ್ಲೂಕಿನಲ್ಲಿ ಇದುವರೆಗೆ ಎಷ್ಟೆಷ್ಟು ಮನವಿಗಳಿದ್ದವೋ ಅವೆಲ್ಲವನ್ನೂ ಪರಿಶೀಲನೆಮಾಡಿ, ಸರ್ವೆಮಾಡಿ, ಯೋಜನೆಮಾಡಿ, ಮಂಜೂರಾಗಿವೆ. ಇದುವರೆಗಿದ್ದವೆಲ್ಲವೂ ಆಗಿವೆ. ಇತ್ತೀಚೆಗೆ ನಾಲ್ಕು ಪಂಪುಗಳನ್ನು ಕೊಡಬೇಕೆಂದು ಅರ್ಜಿಗಳು ಬಂದು ಆರ್ಡರ್ ಆಗಿದೆ, ಕೆಲಸ ನಡೆಯುತ್ತಿದೆ. ಇನ್ನು ಮುಂದೆ ಮನವಿಗಳು ಬಂದರೆ ಆಗ ಪರಿಶೀಲನೆಮಾಡೋಣ.

ಒಂದಂಶವನ್ನು ಮಾತ್ರ ಈ ಸಮಯದಲ್ಲಿ ಹೇಳಬೇಕು. 50 ಲಕ್ಷ ರೂಪಾಯಿ ಕೊಟ್ಟಿರುವುದು ಈಗಾಗಲೇ ಈ ಸಭೆಯಮುಂದೆ ಬಂದಿದೆ. ಇದನ್ನು ಕೊಡುವಾಗ, ಇಂಥಿಂಥ ಕೆಲಸಗಳಿಗೇ, ಇಂಥ ಸ್ಥಳಗಳಿಗೇ ಕೊಡಬೇಕೆಂಬ ಷರತ್ತುಗಳನ್ನು ಹಾಕಿ earmark ಮಾಡಿ, ಇಂಡಿಯಾ ಸರ್ಕಾರದವರು ಕೊಟ್ಟಿದ್ದಾರೆ. ಅವರು ಸೂಚಿಸಿದ ತಾಲ್ಲೂಕುಗಳಿಗೇ ಕೊಡಬೇಕು. ಅಲ್ಲಿ ಏನು ಕೆಲಸ ಮಾಡಬೇಕು, ಏನು ಸಹಾಯ ಮಾಡಬೇಕು ಎಂಬುದು ನಿರ್ದಿಷ್ಟವಾಗಿದೆ. ಮುಂದೆ ಇಂಥ ಮನವಿಗಳು ಬಂದರೆ ಸರ್ಕಾರದವರು ಸಹಾನುಭೂತಿಯಿಂದ ನೋಡುತ್ತಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಶಿಂಷಾನದಿಯ ಅಣೆ.

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ಪರಿಶೀಲನೆ ಮಾಡುತ್ತೇವೆ.

Sri M. CHIKKALINGIAH.—I seek leave to withdraw my cut-motion.

The cut motion was, by leave, withdrawn.

Supply of Electricity to certain places in Hassan and Arkalgud Taluks.

ಶ್ರೀ ಜಿ. ಎ. ತಿಮ್ಮಪ್ಪ ಗೌಡ (ಅರಕಲಗೂಡು).—ನಾನು ಈ ಖೋತಾ ಸೂಚನೆಯನ್ನು ಮಂಡಿಸುತ್ತೇನೆ:

"81-A ವಿದ್ಯುಚ್ಛಕ್ತಿ ಯೋಜನೆಗಳ ಸಂಬಂಧದಲ್ಲಿ 'ಬಂಡವಾಳದ ವೆಚ್ಚ' ಎಂಬ ಬಾಬಿನಲ್ಲಿ ಕೋರಿರತಕ್ಕ 16,73,825 ರೂಪಾಯಿಗಳ 'ಡಿಮ್ಯಾಂಡ್' ಮನವಿಯ ಸಂಬಂಧದಲ್ಲಿ 100 ರೂಪಾಯಿಗಳನ್ನು ಕಡಮೆ ಮಾಡಬೇಕು (ಅರಕಲಗೂಡು ತಾಲ್ಲೂಕಿನ ಬಸವಾಪಟ್ಟಣ, ಕೇರಳಾಪುರ ಮತ್ತು ಮಲ್ಲಿಪಟ್ಟಣ ಮತ್ತು ಹಾಸನ ತಾಲ್ಲೂಕಿನ ಗೊರೂರು ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸುವ ಅವಶ್ಯಕತೆಯನ್ನು ಒತ್ತಾಯಪಡಿಸುವುದಕ್ಕಾಗಿ."

ಸ್ವಾಮಿ, ಅರಕಲಗೂಡು ತಾಲ್ಲೂಕಿಗೆ ವಿದ್ಯುಚ್ಛಕ್ತಿ ಇರಲಿಲ್ಲ; ಹೋದವರ್ಷ ಸರ್ಕಾರದವರು ಅಲ್ಲಿಗೆ ವಿದ್ಯುಚ್ಛಕ್ತಿ ಕೊಟ್ಟಿದ್ದಾರೆ. ಬಸವಾಪಟ್ಟಣ, ಕೇರಳಾಪುರ, ಈ ಎರಡು ಗ್ರಾಮಗಳು ರಾಮನಾಥಪುರಕ್ಕೆ ಒಂದೂವರೆ ಅಥವಾ ಎರಡು ಮೈಲಿ ದೂರದಲ್ಲಿವೆ. ಕೊಣನೂರಿಗೆ ವಿದ್ಯುಚ್ಛಕ್ತಿಯನ್ನು ರಾಮನಾಥಪುರದಿಂದ ತೆಗೆದುಕೊಂಡಿದ್ದಾರೆ. ಈ ಗ್ರಾಮಗಳು ಜನಭರಿತವಾಗಿ ಮೂರುಸಾವಿರ ಜನಸಂಖ್ಯೆಯಿರುವ ದೊಡ್ಡ ಗ್ರಾಮಗಳು ಮತ್ತು ಫಲವತ್ತಾದ ಪ್ರದೇಶ. ಅಲ್ಲಿಗೆ ವಿದ್ಯುಚ್ಛಕ್ತಿಯನ್ನೊದಗಿಸಿದರೆ ಗದ್ದೆಗಳಿಗೆ ಪಂಪುಗಳ ಮೂಲಕ ನೀರನ್ನೊದಗಿಸಿಕೊಳ್ಳಲು ಅನುಕೂಲವಾಗುತ್ತದೆ. ನಮ್ಮ ಜಿಲ್ಲೆಗೆ ಅಲ್ಲದೆ ನಮ್ಮ ಸಂಸ್ಥಾನದಲ್ಲೇ ಪ್ರಸಿದ್ಧವಾಗಿರುವ ಅಡಿಕೆ ವೀಳೆಯದೆಲೆಯನ್ನು ಅಲ್ಲಿ ಬೆಳೆಯುತ್ತಾರೆ, ಆ ಗ್ರಾಮಗಳಲ್ಲಿ ಸಾವಿರಾರು ವರ್ಗಗಳನ್ನು ಹಾಕಿಕೊಂಡಿರುತ್ತಾರೆ. ಅಲ್ಲಿಗೆ ವಿದ್ಯುಚ್ಛಕ್ತಿಯನ್ನೊದಗಿಸಿದರೆ ಆ ಪ್ರಾಂತ್ಯದ ಜನರಿಗೆ ಬಹಳ ಅನುಕೂಲವಾಗುತ್ತದೆ. ತಾವು ಏನು ಷರತ್ತುಗಳನ್ನು ಹಾಕಿದ್ದೀರೋ ಅವುಗಳಿಗೂ ಸರಿಹೋಗುತ್ತದೆ. ಇದನ್ನು ಮಾಡದಿದ್ದರೆ, ವಿದ್ಯಾಮಂತ್ರಿಗಳು ಆ ಜಿಲ್ಲೆಯವರಾದರೂ ಅವರು ಅಲ್ಲಿಗೆ ಏನೂ ಉಪಕಾರಮಾಡುತ್ತಿಲ್ಲವೆಂದು ಅವರಮೇಲೆ ಅಪವಾದನೆ ಬರುತ್ತದೆ. ಅಲ್ಲಿಯ ಜನ ಬಡವರೆಂದು ಅವರಿಗೆ ಗೊತ್ತೇ ಇದೆ.

ವಿದ್ಯುಚ್ಛಕ್ತಿಯ ಹಂಚಿಕೆಯ ವಿಚಾರದಲ್ಲಿ, ಅದರಲ್ಲಿಯೂ ನೀರಾವರಿಗೆ ವಿದ್ಯುಚ್ಛಕ್ತಿಯನ್ನು ಜಿಲ್ಲಾವಾರು ಹಂಚುವ ವಿಷಯದಲ್ಲಿ ಕೂಡ, ಅನ್ಯಾಯವಾಗುತ್ತಿದೆ. ಹೀಗೆ ಅನ್ಯಾಯವಾಗುತ್ತಿರುವುದನ್ನು ಪ್ರತಿಭಟಿಸುವುದು ಪ್ರತಿಯೊಬ್ಬ ಸದಸ್ಯರ ಕರ್ತವ್ಯ. ಎಲ್ಲ ಜಿಲ್ಲೆಗಳಿಗೂ ಒಂದೇ ರೀತಿಯಾಗಿ ನಡೆಯುತ್ತಿಲ್ಲ. ಮಲೆನಾಡು ಜಿಲ್ಲೆಗಳಾದ ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಿಗೆ ವಿದ್ಯುಚ್ಛಕ್ತಿಯನ್ನು ದಾಮಾಷಾ ಪ್ರಕಾರ ಕೊಡದೇಯಿರುವುದು ಬಹಳ ಅನ್ಯಾಯ. ಇದರಿಂದ ಆ ಜಿಲ್ಲೆಗಳ ಅಭಿವೃದ್ಧಿಗೆ ಬಹಳ ಕಷ್ಟವಾಗಿದೆ, ಮುಂದಾದರೂ ಇವಕ್ಕೆ ನಿಗಾ ಕೊಟ್ಟು ಸಹಾಯಮಾಡಬೇಕು. ಇದುವರೆಗೆ 50 ಲಕ್ಷ ರೂಪಾಯನ್ನು ಇಂಡಿಯಾ ಸರ್ಕಾರದವರು ಹೇಳಿದಂತೆ ಕ್ಷಾಮನಿವಾರಣೆಗೆ ಖರ್ಚುಮಾಡಬೇಕೆಂದು ಕೆಲವು ಪ್ರದೇಶಗಳಿಗೆ ಖರ್ಚುಮಾಡುತ್ತಿದ್ದೀರಿ. ದೇವರ ದಯೆಯಿಂದ ಪ್ರದೇಶದಲ್ಲಿಅನಾವೃಷ್ಟಿಯಾಗಿದೆ. ಆದ ಅತಿವೃಷ್ಟಿಯಾಗುತ್ತಿದ್ದಕಾರಣ ಕ್ಷಾಮಪ್ರದೇಶದ classification ಈಗೇನು ಮಾಡಿದ್ದೀರೋ ಅದನ್ನು ಈಗ ಪುನರ್ವಿಮರ್ಶೆ ಮಾಡಿ ಮಾರ್ಪಾಡು ಮಾಡಿ, ಈ ವಿಷಯವನ್ನು ಇಂಡಿಯಾ ಸರ್ಕಾರಕ್ಕೆ ತಿಳಿಸಿ, ಇಲ್ಲಿಂದ ಮುಂದೆ ಎಲ್ಲಿ ತೊಂದರೆ ಇದೆಯೋ ಆ ಪ್ರದೇಶಗಳಿಗೆ ಕ್ಷಾಮ ಪ್ರದೇಶವೆಂತಲಾದರೂ ಮಾಡಿ, ತೊಂದರೆಗೊಳಗಾದ ಪ್ರದೇಶವೆಂದಾದರೂ ಮಾಡಿ. ಸಹಾಯಮಾಡಿ. ಇದುವರೆಗೆ ಬಾವಿ ಕೆರೆಗಳ ರಿಪೇರಿಗೆ ಕೋಲಾರ, ಚಿತ್ರದುರ್ಗ ಜಿಲ್ಲೆಗಳಿಗೆ ಹೆಚ್ಚಿನ ಹಣವನ್ನೊದಗಿಸಲಾಗಿದೆ. ಅರಸೀಕೆರೆಗೆ ಮಾತ್ರ ನಮ್ಮ ಜಿಲ್ಲೆಯಲ್ಲಿ ಕೊಟ್ಟಿದೆ. ಮಿಕ್ಕವರಿಗೆ ಸಿಕ್ಕುತ್ತಿಲ್ಲ. ಅಲ್ಲಿಗೆ ಕೊಡಲು ನಮ್ಮ ಅಭ್ಯಂತರವೇನೂ ಇಲ್ಲ. ಆದರೆ ಇದನ್ನು ಪುನಃ ಪರಿಶೀಲನೆ ಮಾಡಿ, ಸೂಕ್ತ ಬದಲಾವಣೆ ಮಾಡಬೇಕು. ನಮ್ಮ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿ ಕೊಡತಕ್ಕ ಅವಶ್ಯಕತೆ ಬಹಳ ಕಡೆಗಳಿಗಿದೆ. ಜರೂರಾಗಿ ಕೊಡಬೇಕು. ತಾವೇನೋ ಕೊಡುತ್ತೀರಿ, ಆದರೆ ಈ ಸಹಾಯ ಜನರಿಗೆ ದೊರಕುವುದು ಇನ್ನು ಐದು ವರ್ಷವಾಗುತ್ತದೆ. ವಿದ್ಯುಚ್ಛಕ್ತಿಯನ್ನೊದಗಿಸುವುದರಿಂದ ವ್ಯವಸಾಯಗಾರರಿಗೂ ಜನರಿಗೂ ಉಪಯೋಗವಾಗುತ್ತದೆ, ಸರ್ಕಾರಕ್ಕೂ ಲಾಭ ಬರುತ್ತದೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ, ಸರ್ಕಾರದವರಿಗೂ ಗೊತ್ತಿದೆ. ಆದರೆ ತಡವಾಗುತ್ತದೆ. 'ರೆಡ್‌ಟೇಪಿಸಂ' ಹೆಚ್ಚುತ್ತಿದೆ. ಸರ್ಕಾರದವರು ಯಾವುದೇ ಕೆಲಸವನ್ನು ನ್ಯಾಯವೆಂದು ಒಪ್ಪಿಕೊಂಡರೂ, ಅದು ನಡೆಯಬೇಕಾದರೆ ಒಂದು ವರ್ಷ, ಎರಡು ವರ್ಷ ತಡವಾಗುತ್ತದೆ. ಈ ವಿಷಯದಲ್ಲಿ ನಮ್ಮ ಗೃಹಸಚಿವರು ಅಧಿಕಾರಿಗಳನ್ನು pull-up ಮಾಡುವುದನ್ನು ನಾನು ನೋಡಿದ್ದೇನೆ. ಹೀಗೆ ನಿಧಾನವಾಗುವುದನ್ನು ತಪ್ಪಿಸಬೇಕು. ಜನರಿಂದ ಬರುವ ದೂರನ್ನು ತಪ್ಪಿಸಿಕೊಳ್ಳಲು ಪ್ರಯತ್ನಮಾಡಬೇಕು, ಮಾಡಬೇಕಾದ ಕೆಲಸ

ವನ್ನು ಬೇಗ ಮಾಡಬೇಕು ಎಂದು ಹೇಳಿ ಈ ಖೋತಾ ಸೂಚನೆಯನ್ನು ಮಂಡಿಸುತ್ತೇನೆ.

Mr. SPEAKER.—Cut motion moved:

"That the demand be reduced by Rs. 100."

(Sri T. C. BASAPPA rose up.)

Mr. SPEAKER.—Are you speaking for Hassan or Chickmagalur?

Sri T. C. BASAPPA.—For Chickmagalur, Sir.

Mr. SPEAKER.—There is no question of Chickmagalur here.

*ಶ್ರೀ ಎಚ್. ಸಿದ್ದವೀರಪ್ಪ.—ಸ್ವಾಮಿ, ನನ್ನ ಸ್ನೇಹಿತರು ಶ್ರೀಮಾನ್ ತಿಮ್ಮಪ್ಪಗೌಡರು ಮಲೆನಾಡಿನ ಪ್ರಾಂತ್ಯವಾದ ಈ ಪ್ರದೇಶದಲ್ಲಿ ವಿದ್ಯುಚ್ಛಕ್ತಿಯನ್ನು ಹೆಚ್ಚುಕೊಟ್ಟಿಲ್ಲವೆಂದು ಹೇಳಿದರು. ಅಂಕಿಅಂಶಗಳನ್ನು ನೋಡಿದರೆ, ಅವರ ವಾದಕ್ಕೆ ಸಮರ್ಥನೆ ದೊರೆಯುವಂತಿದೆ. ಮಲೆನಾಡು ಪ್ರಾಂತ್ಯದಲ್ಲಿ ವ್ಯವಸಾಯಕ್ಕೆ ವಿದ್ಯುಚ್ಛಕ್ತಿ ಪಂಪುಗಳನ್ನು ಕೊಟ್ಟಿರುವುದು ಬಹಳ ಕಡಿಮೆಯಾಗಿದೆ. ಇದು ಯಾವ ದೃಷ್ಟಿಯಿಂದ, ಹೇಗಾಯಿತು ಎಂದು ಯೋಚನೆ ಮಾಡಿದರೆ, ಸರ್ಕಾರಕ್ಕೆ ಅಲ್ಲಿಗೆ ಕೊಡಬಾರದೆಂಬ ಅಭಿಪ್ರಾಯವೇನೂ ಇರಲಿಲ್ಲ, ಇಲ್ಲಿಯವರೆಗೆ ಅಲ್ಲಿಗೆ ಕೊಡಬೇಕೆಂದು ಕೇಳತಕ್ಕ ಅವಶ್ಯಕತೆಯಿರಲಿಲ್ಲವೆಂದು ತೋರುತ್ತದೆ. ಇತ್ತೀಚೆಗೆ ಅನೇಕ ಕಡೆ ಮಳೆಯಿಲ್ಲದೆ ತೊಂದರೆಯಾಗಿರುವುದರಿಂದ, ಈಗ ಅಲ್ಲಿಯೂ ಬೇಕಾಗಿದೆ. ಕಡೂರು, ತರೀಕೆರೆ, ಹಾಸನ ಈ ಕೆಲವು ಭಾಗಗಳಲ್ಲಿ, ನಾನು ನೋಡಿದಹಾಗೆ, ಅವು ಮಲೆನಾಡಾದರೂ ಮಳೆಯಿಲ್ಲದೆ ವಿದ್ಯುಚ್ಛಕ್ತಿ ಬೇಕೆಂಬ ವಾದ ಬಂದಿದೆ. ಇದನ್ನು ಸರ್ಕಾರದವರು ಸಹಾನುಭೂತಿಯಿಂದ ಯೋಚನೆಮಾಡಲೇಬೇಕು.

ಇನ್ನೊಂದು ವಿಷಯವನ್ನು ಈ ಸಮಯದಲ್ಲಿ ಮಾನ್ಯ ಸ್ನೇಹಿತರಾದ ತಿಮ್ಮಪ್ಪಗೌಡರಿಗೆ ತಿಳಿಸಬೇಕಾಗಿದೆ. ಈ 50 ಲಕ್ಷ ರೂಪಾಯಿಗಳನ್ನು ಹಂಚಬೇಕಾದರೆ, ಇದರಲ್ಲಿ ನಮ್ಮ ಸರ್ಕಾರದ ಕೈವಾಡವೇನೂ ಇಲ್ಲ; ಮೂರು ಜಿಲ್ಲೆಗಳಿಗೆ ಮಾತ್ರ ಹಂಚಬೇಕೆಂಬುದು ಈ ಸರ್ಕಾರದ ನೀತಿಯೇನೂ ಅಲ್ಲ. ಇದಕ್ಕೆ ಕಾರಣ ಹೇಳುತ್ತೇನೆ. ಕಳೆದ ವರ್ಷ ಸಂಸ್ಥಾನದಲ್ಲಿ ಅಭಾವಸ್ಥಿತಿ ಬಂದಾಗ ಇಂಡಿಯಾ ಸರ್ಕಾರದವರು ಶ್ರೀರಾಮಮೂರ್ತಿಯವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಿ ಎಲ್ಲೆಲ್ಲಿ ಕ್ಷಾಮವಿದೆಯೋ ಅಲ್ಲಿ ಖಾಯಂ ಪರಿಹಾರ ಕೊಡಬೇಕಾದರೆ ಯಾವ ಯೋಜನೆಯನ್ನು ಹಾಕಬೇಕೆಂದು ಯೋಚನೆ ಮಾಡಿ ಸಲಹೆಮಾಡುವುದಕ್ಕಾಗಿ ಕಳುಹಿಸಿದರು. ಅವರು ಇಲ್ಲಿಗೆ ಬಂದು ಬಯಲು ಸೀಮೆಗಳಾದ ಚಳ್ಳಕೆರೆ, ಮೊಳಕಾಲ್ಮೂರು ಇಂಥಾ ಪ್ರದೇಶಗಳಿಗೆ ಹೋದಾಗ ಅಲ್ಲಿ ನೀರಿನ ಸೌಕರ್ಯವನ್ನು ನೋಡಿ, ಮೈಸೂರು ದೇಶದ ವ್ಯವಸಾಯಕ್ಕೆ ವಿದ್ಯುಚ್ಛಕ್ತಿ ದೊರೆಯುತ್ತಿರುವುದನ್ನು ಗಮನಿಸಿ, ಇಂಡಿಯಾ ಸರ್ಕಾರದವರಿಗೆ ಖಚಿತವಾಗಿ ಶಿಫಾರಸು ಮಾಡಿದ್ದಾರೆ. ಆ ಪ್ರದೇಶಲ್ಲಿ ಸರಾಸರಿ ಮಳೆ ಈ ರೀತಿ ಇದೆ, ನೀರಿನ ಸೌಕರ್ಯ ಈ ರೀತಿ ಇದೆ, ಎಂಬುದನ್ನು ಗಮನಿಸಿ ಖಾಯಂ ಪರಿಹಾರಮಾರ್ಗವನ್ನು ಶಿಫಾರಸು ಮಾಡುತ್ತೇವೆ, ಅಲ್ಲಿಗೆ ವಿದ್ಯುಚ್ಛಕ್ತಿ ಕೊಟ್ಟು ಸಹಾಯ ಮಾಡಬೇಕು ಎಂದು ಹೇಳಿದರು. ಎಲ್ಲೆಲ್ಲಿಗೆ ವಿದ್ಯುಚ್ಛಕ್ತಿಯನ್ನು ನೀರಾವರಿಗೆ ಕೊಟ್ಟು ಸಹಾಯಮಾಡಬೇಕೆಂದು ರಾಮಮೂರ್ತಿ ಸಮಿತಿಯವರು ಶಿಫಾರಸು ಮಾಡಿದರೋ ಅಲ್ಲಿಗೆ ಕೊಡಬೇಕೆಂದು ಇಂಡಿಯಾ ಸರ್ಕಾರದವರು ಹಣವನ್ನು ಮಂಜೂರು ಮಾಡಿದರು.

ಒಂದು ತತ್ವವನ್ನು ನಾನು ಒಪ್ಪುತ್ತೇನೆ. "All good things in life should be equitably shared by all" ಎಂಬ ತತ್ವವನ್ನು ನಾನು ಒಪ್ಪುತ್ತೇನೆ. ನಮ್ಮ ಮುಖ್ಯ ಮಂತ್ರಿಗಳೂ ಈ ವಿಚಾರದಲ್ಲಿ ಇಂಡಿಯಾ ಸರ್ಕಾರಕ್ಕೆ ಬರೆದಿದ್ದಾರೆ. ಈಚೆಗೆ ನಮ್ಮ ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿಯನ್ನು ಎಲ್ಲ ಭಾಗದವರೂ ಕೇಳುತ್ತಾರೆ. ಇದರ ಬೆಲೆ ರೈತರಿಗೆ ಹೆಚ್ಚು ಹೆಚ್ಚಾಗಿ ಗೊತ್ತಾಗುತ್ತಿದೆ. ಬಾಕಿ ಜಿಲ್ಲೆಗಳಿಗೂ ಇನ್ನೂ ಹೆಚ್ಚಾಗಿ ಇದರ ಸೌಕರ್ಯ ಒದಗಬೇಕು ಎಂದು ಇಂಡಿಯಾ ಸರ್ಕಾರಕ್ಕೆ ತಿಳಿಸಿದ್ದಾರೆ. ಇದನ್ನು ಮುಂದುವರಿಸುತ್ತೇವೆ. ಒಂದು ವೇಳೆ ಯಾವ ಕಾರಣದಿಂದಲಾದರೂ ಅವರು ಕೊಡತಕ್ಕ ಸಾಲದ ಹಣವನ್ನು ಇದಕ್ಕೆ ಉಪಯೋಗಿಸುವುದಕ್ಕೆ ಅವಕಾಶವಾಗದಿದ್ದರೆ, ಗ್ರೋ ಮೋರ್ ಫುಡ್ ಫಂಡಿನಿಂದ ಸಹಾಯಮಾಡಬೇಕಾಗಿ ಬಂದರೆ ಹೇಗೆ ಮಾಡಬೇಕೆಂಬುದನ್ನೂ ಆಲೋಚನೆ ಮಾಡುತ್ತಿದ್ದೇವೆ.

4-30 P. M.

ಸ್ವಾಮಿ, ಈ ಖೋತಾ ನಿರ್ಣಯದ ಮೂಲೋದ್ದೇಶದ ವಿಚಾರದಲ್ಲಿ ಒಂದೆರಡು ಮಾತುಗಳನ್ನು ನನ್ನ ಮಾನ್ಯ ಮಿತ್ರರಿಗೆ ತಿಳಿಸಬೇಕಾಗಿದೆ. ಈಗಾಗಲೆ ಎಲ್ಲಾ ಕಡೆಯಲ್ಲೂ ಸರ್ವೆಮಾಡುತ್ತಿದ್ದಾರೆ. ವಿದ್ಯುಚ್ಛಕ್ತಿಯ ಸರಬರಾಯಿಗೆ ಅಗತ್ಯವಾದ ಸಾಮಾನುಗಳನ್ನು ತರಿಸಲಾಗುತ್ತಿದೆ. ಸದ್ಯದಲ್ಲೇ ಸಾಕಷ್ಟು ವಿದ್ಯುಚ್ಛಕ್ತಿಯನ್ನು ಸರಬರಾಯಿಮಾಡಬೇಕೆಂದಿದ್ದೇವೆ. ಆದರೆ ಇದರಲ್ಲಿ ಒಂದು ವಿಚಾರವಾಗಿದೆ. ಅವರು ಅರ್ಜಿಕೊಟ್ಟು ಕೇಳಿರತಕ್ಕ ಸ್ಥಳಗಳಿಗೆಲ್ಲಾ ವಿದ್ಯುಚ್ಛಕ್ತಿಯನ್ನು ಕೊಡಬೇಕಾಗಿದ್ದರೆ ಸರ್ಕಾರಕ್ಕೆ ಅವುಗಳಿಂದ ಎಷ್ಟೆಷ್ಟು ರಿಟರ್ನ್ ಬರಬೇಕೋ ಅಷ್ಟು ಬರುವಂತೆ ಕಾಣುತ್ತಿಲ್ಲ. ಸರ್ಕಾರಿ ಆಜ್ಞೆಯಲ್ಲಿ ಹೇಳಿರುವಂತೆ 7 ಪರ್ಸೆಂಟ್ ರಿಟರ್ನ್ ಬಂದರೆ ಮಾತ್ರವೇ ಅಂಥ ಕಡೆಗೆ ಇದನ್ನು ಕೊಡಬೇಕೆಂದಿರುತ್ತದೆ. ಆದರೆ ಅದಕ್ಕೂ ಒಂದು ರಿಯಾಯಿತಿಯನ್ನು ಕೊಟ್ಟಿದ್ದೇವೆ. ಈಗಾಗಲೇ ರಾಮನಾಥಪುರ, ಬಸವಪಟ್ಟಣಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸಲು 2,45,800 ರೂಪಾಯಿಗಳ ಅಂದಾಜು ತಯಾರಾಗಿದೆ. ಆದರೆ ಅದರಿಂದ ಸೇಕಡ 5 ಮಾತ್ರ ರಿಟರ್ನ್ ಬರುತ್ತದೆ. ಇನ್ನು ಗೊರೂರಿಗೆ 95ಸಾವಿರದಲ್ಲಿ ಒಂದು ಅಂದಾಜು ತಯಾರಾಗಿದೆ. ಅದರಿಂದ ಬರತಕ್ಕ ರಿಟರ್ನ್ ಮಾತ್ರ ಶೇಕಡ3.3. ಮಲ್ಲಪಟ್ಟಣಕ್ಕೆ 75 ಸಾವಿರದಲ್ಲಿ ಅಂದಾಜು ತಯಾರಾಗಿದೆ. ಶೇಕಡ 4·6 ಮಾತ್ರ ರಿಟರ್ನ್ ಬರುತ್ತದೆ. ಆದುದರಿಂದ ನಾನಾಗಲೇ ತಮ್ಮಲಿ ಅರಿಕೆ ಮಾಡಿಕೊಂಡಿರುವಂತೆ ಇನ್ನೂ ಅನೇಕ ಜನ ರೈತರಿಗೆ ಇದರಿಂದ ಒಂದು ಪ್ರೋತ್ಸಾಹ ಹುಟ್ಟುವಂತೆ ಮಾಡಲು ಅವರಿಗೆ ಇದನ್ನು ಒದಗಿಸಬೇಕೆಂದಿರುತ್ತೇವೆಂಬ ಭರವಸೆಯನ್ನು ನಾನೀಗ ತಮಗೆ ನೀಡುತ್ತೇನೆ. ಇಷ್ಟು ಹೇಳಿದ ಮೇಲೆ ತಾವು ಇದನ್ನೂ ವಾಪಸ್ಸು ತೆಗೆದುಕೊಳ್ಳುತ್ತೀರೆಂದು ನಂಬಿದ್ದೇನೆ.—

Sri G. A. THIMMAPPA GOWDA.—I seek leave to withdraw the cut motion.

The cut motion was, by leave, withdrawn.

Mr. SPEAKER.—The next motion stands in the name of Sri B. Hutche Gowda. It may be moved by Sri Mulka Govinda Reddy.

Supply of power to irrigation pumps in Turuvekere Taluk.

ಶ್ರೀ ಮುಲ್ಕ ಗೋವಿಂದರೆಡ್ಡಿ (ಚಿತ್ರದುರ್ಗ).—ಸ್ವಾಮಿ ಡಿಮ್ಯಾಂಡ್ ನಂ. 42ರ ಬಗ್ಗೆ ನಂ. 40ನೆಯ ಖೋತಾ ಸೂಚನೆಯನ್ನು ಶ್ರೀಮಾನ್ ಬಿ. ಹುಚ್ಚೆಗೌಡರು ಕಳುಹಿಸಿದ್ದಾರೆ. ಆದರೆ ಅವರು ಈಗ ಸಭೆಯಲ್ಲಿಲ್ಲದಿರುವುದರಿಂದ ನಾನೀಗ ಅದನ್ನು ಸಭೆಯ ಮುಂದೆ ತಮ್ಮ ಅಪ್ಪಣೆಪಡೆದು ಮಂಡಿಸುತ್ತೇನೆ.

ಖೋತಾ ಸೂಚನೆಯು ಈ ರೀತಿಯಾಗಿದೆ:

"That the demand under the head 81-A. Capital Outlay on Electricity Schemes" for Rs. 16,73,825 be reduced by Rs. 100 (to urge the necessity of supplying power to irrigation pumps in Turuvekere Taluk out of this grant)."

ಸ್ವಾಮಿ, ತುಮಕೂರು ಡಿಸ್ಟ್ರಿಕ್ಟಿನಲ್ಲಿ ಅಭಾವ ಪರಿಸ್ಥಿತಿಗೊಳಗಾಗಿರುವ ಪ್ರದೇಶಗಳಲ್ಲಿ ತುರುವೇಕೆರೆಯ ತಾಲ್ಲೂಕೂ ಒಂದಾಗಿದೆ. ಈ ವಿಚಾರ ಸರ್ಕಾರದವರಿಗೂ ಗೊತ್ತಿದೆ. ಈ ತಾಲ್ಲೂಕಿನಲ್ಲಿ ಅನೇಕರು ಈ ನೀರಾವರಿ ಪಂಪುಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸಬೇಕೆಂದು ಕೇಳುತ್ತಿದ್ದಾರೆ. ಆದರೆ ಈಗ ಕೇವಲ 10-15 ಗ್ರಾಮಗಳಲ್ಲಿರತಕ್ಕ ಬಾವಿಗಳವರಿಗೆ ಇದರ ಅಗತ್ಯ ಜಾಸ್ತಿಯಾಗಿದೆ. ಆದುದರಿಂದ ಸರ್ಕಾರದವರು ಅದನ್ನು ಬೇಗ ಮಂಜೂರು ಮಾಡಿಕೊಡಬೇಕೆಂದು ಒತ್ತಾಯ ಪಡಿಸಿ ನಾನು ಈ ಖೋತಾ ಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER.—Cut motion moved:

"That the demand be reduced by Rs. 100."

*ಶ್ರೀ ಎಚ್. ಸಿದ್ಧವೀರಪ್ಪ.—ಸ್ವಾಮಿ, ಈಗಾಗಲೇ ಆ ತಾಲ್ಲೂಕಿನಲ್ಲಿ ಅನೇಕ ಗ್ರಾಮಗಳಲ್ಲಿ ಸರ್ವೆ ಕೆಲಸ ಮುಗಿಯುತ್ತಾ ಬಂದಿದೆ. 106 ಐ. ಪಿ. ಸೆಟ್‌ಗಳು ನಮಗೆ ಈಗ ಬರತಕ್ಕವುಗಳಿವೆ. ಈ ತಾಲ್ಲೂಕಿನಲ್ಲಿ ಈಗಾಗಲೇ ಅನೇಕ ಗ್ರಾಮಗಳಿಗೆ ಈ ವಿದ್ಯುಚ್ಛಕ್ತಿಯನ್ನು ಕೊಡತಕ್ಕ ಬಗ್ಗೆ ಅರಸಿದ್ದೇ ಹಳ್ಳಿ, ಕುಂಡ, ಚಂದೂರು ಇತ್ಯಾದಿ ಗ್ರಾಮಗಳ ಅಂದಾಜುಗಳು ತಯಾರಾಗುತ್ತಿವೆ. ಕಲ್ಲೂರಿಗೆ ವಿದ್ಯುಚ್ಛಕ್ತಿಯನ್ನು ಕೊಡತಕ್ಕ ಬಗ್ಗೆ 5, 62,000 ರೂಪಾಯಿಗಳ ಅಂದಾಜು ತಯಾರಾಗಿದೆ. ನಾನಾಗಲೇ ತಮಗೆ ಅರಿಕೆಮಾಡಿಕೊಂಡಿರುವಂತೆ ಇದನ್ನು ಲಾಭದಾಯಕವಾಗಿ ಕಂಡುಬರುವ ಕಡೆಗಳಿಗೆಲ್ಲಾ ಒದಗಿಸಲು ಸರ್ಕಾರದವರು ಎಲ್ಲವನ್ನು ಸಹಾನುಭೂತಿಯಿಂದ ಪರಿಶೀಲನೆಮಾಡುತ್ತಾರೆಂಬ ಅಂಶವನ್ನು ತಿಳಿಸಿದನಂತರ ಮಾನ್ಯ ಸದಸ್ಯರು ಇದನ್ನು ವಾಪಸು ತೆಗೆದುಕೊಳ್ಳುತ್ತಾರೆಂದು ಆಶಿಸುತ್ತೇನೆ.

Sri MULKA GOVINDA REDDY.—I seek leave to withdraw the cut motion.

The cut motion was, by leave, withdrawn.

Scheme to supply power to poor raiyats.

ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ, ನನ್ನ ಖೋತಾ ಸೂಚನೆಯು ಈ ರೀತಿಯಾಗಿದೆ. ಅದನ್ನು ಮಂಡಿಸುತ್ತೇನೆ.

"That the demand under the head '81-A. Capital Outlay on Electricity Schemes' for Rs. 16,73,825 be reduced by Rs. 100 (to know the scheme of the Government for supplying power for irrigation purposes to the poor raiyats.)"

ಸ್ವಾಮಿ, ನಾನು ಈ ಖೋತಾ ನಿರ್ಣಯವನ್ನು ಸಭೆಯ ಮುಂದಿಡುತ್ತ ಒಂದೆರಡು ಮಾತುಗಳನ್ನು ಹೇಳ ಬಯಸುತ್ತೇನೆ. ಈಗಾಗಲೇ ಹಿಂದಿನ ಖೋತಾ ನಿರ್ಣಯಕ್ಕೆ ಉತ್ತರವನ್ನು ಕೊಡುತ್ತ ಮಾನ್ಯ ಮಂತ್ರಿಗಳು ಸರ್ಕಾರದವರು ಬಡರೈತರಿಗೆ ಯಾವ ರೀತಿ ವಿದ್ಯುಚ್ಛಕ್ತಿಯನ್ನು ವ್ಯವಸಾಯೋದ್ಯಮಗಳಿಗೆ ಒದಗಿಸಲು ಪ್ರಯತ್ನಪಡುತ್ತಿದ್ದಾರೆಂಬ ಬಗ್ಗೆ, ಸರ್ಕಾರದವರು ಈಗ ರೈತನಿಂದ ಯಾವ ಹಣವನ್ನೂ ಕೇಳದೆ ರೈತರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದರ ಜೊತೆಗೆ ಅವರಿಗೆ ಈ ಸಂಬಂಧವಾಗಿ ಇನ್ನೂ ಏನೇನು ಬೇಕಾಗುತ್ತದೋ ಅಂಥ ಸಾಮಗ್ರಿಗಳನ್ನು ಎಂದರೆ, ಪಂಪುಸೆಟ್‌ಗಳು. ಪಂಪ್‌ಹೌಸ್ ಇತ್ಯಾದಿಗಳನ್ನೆಲ್ಲಾ ಒದಗಿಸಿ ಅವರಿಗೆ ಈ ಪವರ್‌ಸಪ್ಲೈಮಾಡಿ, ತದನಂತರ ಅವರಿಂದ ಕಂತು ಮೂಲಕವಾಗಿ ಹಣವನ್ನು ವಸೂಲ್ಮಾಡಿಕೊಳ್ಳಬೇಕೆಂಬ ಉದ್ದೇಶವಿದೆ ಎಂದು ಹೇಳಿದರು, ಆದರೆ ಈಗ ಮಾನ್ಯ ಮಂತ್ರಿಗಳು ಏನನ್ನು ಹೇಳಿದರೋ ಅದನ್ನೇ ನಾವೂ ಸಹ ಮುಂದಾಗಿಯೇ ಆಲೋಚನೆ ಮಾಡಿದ್ದೆವು, ನಮ್ಮ ರೈತರೆಲ್ಲರೂ ಬಡವರು, ಇವರು ಈ ವಿದ್ಯುಚ್ಛಕ್ತಿಯನ್ನು ಯಾವ ರೀತಿಯಲ್ಲಾಗಲೀ ಒದಗಿಸಿದರೆ ಅದನ್ನು ಉಪಯೋಗಿಸಿಕೊಳ್ಳುವ ಶಕ್ತಿ ಇವರಿಗೆ ಇದೆಯೇ ಎಂದು ನೋಡಿದ್ದರಲ್ಲಿ ಈ ಯೋಜನೆಯಿಂದಲೂ ಕೂಡ ಅವರಿಗೆ ಇದನ್ನು ಬಳಸಲು ಎಷ್ಟು ಕಷ್ಟವಿದೆಯೆಂಬುದು ಎದ್ದು ಕಾಣುತ್ತದೆ. ಈಗ ಕಾನೂನಿನಲ್ಲಿ ತಾವು ಹೇಳಿರತಕ್ಕ ಕಂಡೀಷನ್ ಪ್ರಕಾರ ಅವರು ಯಾವತ್ತೂ ಮನೆಯಲ್ಲಿ ದೀಪಕ್ಕೇ ಆಗಲಿ ಅಥವಾ ಅವರ ವ್ಯವಸಾಯಕ್ಕೇ ಆಗಲಿ ಇದನ್ನು ಪಡೆಯುವುದಕ್ಕೆ ಬಹಳ ಕಷ್ಟವಿದೆ. ಅವರು ಪಟ್ಟಣಗಳಿಗೆ ಬಂದಾಗಲೇ ಈ ವಿದ್ಯುಚ್ಛಕ್ತಿಯ ಬೆಳಕಿನ ದೀಪಗಳನ್ನು ನೋಡಬೇಕಾಗಿದ್ದರೆ. ಅಂತೂ ಅವರಿಗೆ ನೇರವಾಗಿ ಇದರ ಉಪಯೋಗ ಪಡೆಯುವುದಕ್ಕೆ ಸಾಧ್ಯವೇ ಇರುವುದಿಲ್ಲ. ಈಗ ಸ್ವಲ್ಪ ಹೊತ್ತಿಗೆ ಮುಂಚೆ ಗುಡಿಬಂಡೆ, ಬಾಗೇಪಲ್ಲಿ ತಾಲ್ಲೂಕುಗಳಿಗೆ ಅಂದರೆ ಕೋಲಾರ ಜಿಲ್ಲೆಗೆ 120 ಪಂಪು ಸೆಟ್ಟುಗಳನ್ನು ಕೊಡಲಾಗಿರುತ್ತದೆಂದು ತಿಳಿಸೋಣವಾಯಿತು ಆದರೆ ಅಲ್ಲಿಗೆ ಕ್ಷಾಮ ಪ್ರದೇಶವೆಂದು ಭಾವಿಸಿ ಹೆಚ್ಚಿಗೆ ಕೊಡಲಾಯಿತೆಂದು ಕೆಲವರು ಸಂತೋಷ ಪಟ್ಟುಕೊಳ್ಳಬಹುದು. ಆದರೆ ಅಲ್ಲಿ ಸಹ ಈಗ ಇದರ ಉಪಯೋಗ

ವನ್ನು ಕೇವಲ ಹಣವಂತರು ಮಾತ್ರ ಪಡೆಯುತ್ತಿರಬಹುದೇ ಹೊರತು ಬಡ ರೈತ, ಗೇಣೀದಾರ ಅಥವಾ ಗುತ್ತಿದಾರರು, ಅವರಿಗೆ ಭೂಮಿ ಇದ್ದಾಗ್ಯೂ, ಈ ಮೂಲಕ ಅವರ ವ್ಯವಸಾಯವನ್ನು ಉತ್ತಮ ಪಡಿಸಿಕೊಳ್ಳುವುದಕ್ಕೆ ಅವರಿಗೆ ಸಾಧ್ಯವಾಗಿಲ್ಲ. ಆದುದರಿಂದ ಸರ್ಕಾರದವರು ಇದಕ್ಕಾಗಿ ಒಂದು ಯೋಜನೆಯನ್ನು ತಯಾರಿಸಿ, ಅದನ್ನು ಕಾರ್ಯರೂಪಕ್ಕೆ ತರಲು ಶ್ರಮವಹಿಸಿ ಕೆಲಸಮಾಡುತ್ತಾರೆಂದು ನಾನು ಆಶಿಸುತ್ತೇನೆ.

ಮತ್ತೊಂದು ವಿಚಾರವೇನೆಂದರೆ, ಈಗ ಜಾರಿಯಲ್ಲಿರುವ ಕಾನೂನಿನ ಆಜ್ಞೆಯ ಪ್ರಕಾರ 100 ರೂಪಾಯಿಗಳನ್ನು ಡಿಪಾಜಿಟ್ ಮಾಡಬೇಕಂದಿದೆ. ಇದು ಬಹಳ ಜಾಸ್ತಿಯಾಯಿತೆಂಬ ನನ್ನ ಅಭಿಪ್ರಾಯ. ಎಲ್ಲ ಕಡೆಗೂ ಈ ವಿದ್ಯುಚ್ಛಕ್ತಿಯನ್ನು ಕೊಡತಕ್ಕ ಬಗ್ಗೆ ತಯಾರಿಸತಕ್ಕ ಯೋಜನೆಗೆ ರಿಜರ್ವ್‌ಬ್ಯಾಂಕ್ ಆಫ್ ಇಂಡಿಯಾದಿಂದ ನಮ್ಮ ಸಂಸ್ಥಾನಕ್ಕೆ 25 ಲಕ್ಷ ರೂಪಾಯಿಗಳನ್ನು ಸಾಲದ ರೂಪವಾಗಿ ಪಡೆದು ತನ್ಮೂಲಕ ರೈತರಿಗೆ ಈವಿದ್ಯುಚ್ಛಕ್ತಿಯನ್ನೊದಗಿಸುವುದು ಒಂದು ವಿಧ. ಮತ್ತೊಂದೇನೆಂದರೆ ಹಳ್ಳಿ ಹಳ್ಳಿಗಳ 'ಕೋಆಪರೇಟಿವ್ ಸೊಸೈಟಿಗಳು ಮತ್ತು ಇಂಥಾ ಸ್ಥಳೀಯ ಸಂಸ್ಥೆಗಳ ಮುಖಾಂತರ ಈ ವಿದ್ಯುಚ್ಛಕ್ತಿಯನ್ನು ಅಣಿಮಾಡಿಕೊಂಡು ನೇರವಾಗಿ ಆ ಸೊಸೈಟಿಗಳ ಮೂಲಕ ಅವರ ವ್ಯವಸಾಯೋದ್ಯಮಗಳಿಗೆ ಒದಗುವಂತೆ ಏರ್ಪಾಡು ಮಾಡಬೇಕೆಂದು ಈಗ ನಾನೊಂದು ಸಲಹೆಯನ್ನು ಸರ್ಕಾರಕ್ಕೆ ನೀಡ ಬಯಸುತ್ತೇನೆ.

ಇನ್ನು ಖೋತಾನಿರ್ಣಯದ ಬಗ್ಗೆ ಮತ್ತು ನಮ್ಮ ಮಲೆನಾಡಿನ ಬಗ್ಗೆ ಈಗಾಗಲೇ ಶ್ರೀ ಜಿ. ಎ. ತಿಮ್ಮಪ್ಪಗೌಡರು ಅನೇಕ ವಿಷಯಗಳನ್ನು ತಿಳಿಸಿದ್ದಾರೆ. ಪ್ರತಿಯೊಂದು ಸಂದರ್ಭದಲ್ಲಿಯೂ ಮಲೆನಾಡಿನವರ ಮೇಲೆ ಮೈದಾನದವರು "ಇವರಿಗೆ ಎಷ್ಟೊಂದು ತೃಷೆಯಿದೆ" ಎಂಬ ಒಂದು ಅನುಮಾನ ಸೂಚಿಸತಕ್ಕದ್ದು ಒಂದು ಕಂಟ್ರೊವರ್ಷಿಯಲ್ ಆದ ವಿಷಯವಾಗಿದೆ. ಆದರೆ ಈಗ ಆ ವ್ಯತ್ಯಾಸಗಳನ್ನೆಣಿಸದೆ ಎಲ್ಲರೂ ಹೊಂದಿಕೊಂಡು ಹೋಗಬೇಕಾದಂಥ ಕಾಲ ಬಂದಿದೆ. ಇನ್ನು ನನ್ನ ಚುನಾವಣಾ ಕ್ಷೇತ್ರವನ್ನು ತೆಗೆದುಕೊಂಡರೆ, ನಾನು ಇರತಕ್ಕದ್ದು ಶರಾವತಿ ನದಿ ಹುಟ್ಟಿಹರಿಯುವ ಪ್ರದೇಶದಲ್ಲಿ. ಆದರೂ ನನ್ನ ಚುನಾವಣೆ ಕ್ಷೇತ್ರದಲ್ಲಿರುವ ಜನಗಳು ಎಂದರೆ ಹೊಸನಗರ ತಾಲ್ಲೂಕಿನವರು ಈ ವಿದ್ಯುಚ್ಛಕ್ತಿಯ ಬೆಳಕನ್ನು ನೋಡಬೇಕಾಗಿದ್ದರೆ ಶಿವಮೊಗ್ಗ ಇಲ್ಲವೇ ಭದ್ರಾವತಿಗೆ ಬರಬೇಕಾಗಿದೆ. ಹೀಗೆ ಮಲೆನಾಡನು ಮೈಸೂರಿನ ಅಭಿವೃದ್ಧಿಗೆ ಎಷ್ಟರ ಮಟ್ಟಿಗೆ ಶೋಷಣೆ ಮಾಡುತ್ತಿದ್ದಾರೆ, ಎಷ್ಟು ಪ್ರತಿಫಲವನ್ನು ಅಲ್ಲಿಂದ ಪಡೆಯುತ್ತಿದ್ದಾರೆಂಬುದನ್ನು ಹೇಳಬೇಕಾದರೆ ಅವರು ಅದರ ಬಗ್ಗೆ ವಾಪಸು ಕೊಡಲಾರದಷ್ಟು ಪ್ರಯೋಜನಗಳನ್ನು ಪಡೆಯುತ್ತಿದ್ದಾರೆಂದು ಹೇಳುತ್ತೇನೆ.

ಆದ್ದರಿಂದ ನಾನು ಆ controversy ಗೆ ಹೋಗುವುದಿಲ್ಲ. ಮಲೆನಾಡಿನಲ್ಲಿ ಮಾನ್ಯಮಂತ್ರಿಗಳು ಹೇಳಿದ ಹಾಗೆ ಮಳೆ 100 ಅಂಗುಲದಿಂದ 300 ಅಂಗುಲದವರೆಗೆ ಬಿದ್ದರೂ, ಮಳೆಗಾಲ ಹೋದಮೇಲೆ ಅಲ್ಲಿನ ಭೂಮಿಯೆಲ್ಲಾ ಒಣಗಿ ಬೆಟ್ಟದಹಾಗಾಗುತ್ತದೆ. ಅಲ್ಲದೆ ನಮ್ಮ ಕಡೆ ಬತ್ತದ ಪೈರು ಒಂದೇ ಪೈರು. ಏಕೆಂದರೆ ಮುಂಗಾರು ಮಳೆ ಬರಬೇಕು, ಬತ್ತದ ಪೈರು ಹಾಕಬೇಕು ಅಷ್ಟೆ. ಮಿಕ್ಕ ಆರೆಂಟು ತಿಂಗಳು ಗದ್ದೆಗಳು ಪಾಳುಬಿದ್ದಿರುತ್ತವೆ. ಡಿಸೆಂಬರಿನಿಂದ ಜೂನ್‌ವರೆಗೂ ಏನೂ ಪೈರಿರುವುದಿಲ್ಲ,

ಆದ್ದರಿಂದ ಅಲ್ಲಿಯೂ ಕೂಡ ವಿದ್ಯುಚ್ಛಕ್ತಿಯನ್ನು ಉಪಯೋಗಮಾಡಿಕೊಂಡು ಕಬ್ಬು, ತೋಟದ ಬೆಳೆಮುಂತಾದುವುಗಳನ್ನು ಮಾಡುವುದಕ್ಕೂ ಮತ್ತು ಕೆಲವು ಸಣ್ಣ ಪುಟ್ಟ ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದಕ್ಕೂ ಸಹಾಯವಾಗುತ್ತದೆ. ಆದ್ದರಿಂದ ಈ ಯೋಜನೆಯನ್ನು ಕಾರ್ಯಗತಮಾಡುವುದರಿಂದ ಹೆಚ್ಚು ಜನ ರೈತರಿಗೆ ತನ್ಮೂಲಕ ಸಂಸಾರಕ್ಕೆ ಉಪಯೋಗವಾಗುತ್ತದೆ ಎಂದು ಹೇಳಿ ಈ ಸೂಚನೆಯನ್ನು ತಮ್ಮ ಮುಂದಿಡುತ್ತೇನೆ.

Mr. SPEAKER.—Cut motion moved:

"That the demand be reduced by Rs. 100."

*ಶ್ರೀ ಸಿದ್ದವೀರಪ್ಪ.—ಸ್ವಾಮಿ, ಈಗಾಗಲೇ ಸರ್ಕಾರದ ನೀತಿಯೇನೆಂಬುದನ್ನು ನಾನು ಸ್ಪಷ್ಟಪಡಿಸಿದ್ದೇನೆ. ಪುನಃ ಹೇಳುವುದಕ್ಕೆ ಹೊರಟರೆ ಪುನರುಕ್ತಿಯಾಗುತ್ತದೆ. ಆದರೆ ಒಂದಂಶ ವನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಶ್ರೀಮಾನ್ ಗೋಪಾಲಗೌಡರು 'ಹಣವಂತರು ಮಟ್ಟಿಗೆ ಎಲೆಕ್ಟ್ರಿಸಿಟಿ ತೆಗೆದುಕೊಳ್ಳುತ್ತಾರೆ, ಹೀಗಾಗಿ ಬಡವರಿಗೇನೂ ಅನುಕೂಲವಾಗುವುದಿಲ್ಲ; ಜಮೀನುಗಳನ್ನು ಹಣವಂತರೇ ಹೆಚ್ಚಿಗೆ ತೆಗೆದುಕೊಳ್ಳುತ್ತಾರೆ; ಆದ್ದರಿಂದ ಅವರಿಗೇ ಹೆಚ್ಚಿಗೆ ಅನುಕೂಲಮಾಡಿದ ಹಾಗಾಗುತ್ತದೆ' ಎಂದು ಹೇಳಿದರು. ಒಂದು ಮಾತಿನಲ್ಲಿ ಹೇಳುವುದಾದರೆ, ಸರ್ಕಾರದವರು ಬಡವರಿಗೇ ಹೆಚ್ಚಿನ ಸಹಾಯಮಾಡಬೇಕು, ಅವರೇ ಹೆಚ್ಚಿನ ಸಹಾಯಕ್ಕೆ ಅರ್ಹರು ಎಂದು ಹೇಳಿ ಆ ಕಡೆಗೆ ಮಾತ್ರ ವಿದ್ಯುಚ್ಛಕ್ತಿ ಒದಗಿಸುವುದಕ್ಕಾಗುವುದಿಲ್ಲ. ಜಮೀನು ಬಡವರದೇ ಆಗಲಿ, ಸಾಹುಕಾರರದೇ ಆಗಲಿ ಎಲ್ಲಿ ನೀರಿಗೆ ಬೇಕಾದಷ್ಟು ಸೌಕರ್ಯವಿದೆಯೋ ಅಲ್ಲಿ ಈ ಅನುಕೂಲ ಮಾಡಿಕೊಡಬೇಕೆಂಬುದು ಸರ್ಕಾರದವರ ನೀತಿಯಾಗಿದೆ. ಮತ್ತೊಂದು ಸಲಹೆಯೇನು ಮಾಡಿದರೆಂದರೆ, ಕೋ-ಆಪರೇಟಿವ್ ಸೊಸೈಟಿಯ ಮೂಲಕ ರಿಸರ್ವ್‌ಬ್ಯಾಂಕಿನವರು ಕೊಡತಕ್ಕ ಹಣದಲ್ಲಿ ಈ ಹಣವನ್ನು ತೆಗೆದುಕೊಳ್ಳುವಂತೆಮಾಡಬೇಕೆಂದು ಹೇಳಿದರು. ಅದನ್ನು ಇಲ್ಲಿಗೆ ಅನ್ವಯಿಸುವುದಕ್ಕಾಗುವುದಿಲ್ಲ. ಏಕೆಂದರೆ ರಿಸರ್ವ್‌ಬ್ಯಾಂಕಿನವರು ಕೊಡುವುದು short term credit. ಅವರು long term credit ಕೊಡುವುದಿಲ್ಲ.

ಕೊನೆಯದಾಗಿ ಒಂದು ಮಾತು ಹೇಳುವುದಾದರೆ, ಈ ವಿಷಯದಲ್ಲಿ ಹಣದ ಅಭಾವವಿಲ್ಲ. ಇವೊತ್ತಿನ ದಿವಸ Hire Purchase System ಪ್ರಕಾರ ಡೀಸಲ್ ಆಯಿಲ್ ಪಂಪ್ ಸೆಟ್ಟುಗಳನ್ನು ಕೊಂಡುಕೊಳ್ಳುವುದಕ್ಕೆ 10 ಲಕ್ಷ ರೂಪಾಯಿಗಳಿವೆ. ಗ್ರೋಮೋರ್ ಫುಡ್‌ಸ್ಕೀಮಿನಲ್ಲಿ ಬೇರೆ ಹಣವಿದೆ. ಈ ಹಣ ಖರ್ಚು ಮಾಡುವುದರಲ್ಲಿ ಎಲ್ಲಿ ಲೈನ್ ಎಳೆದರೆ ಸಂಪೂರ್ಣವಾದ ಸೌಕರ್ಯವನ್ನು maximum benefit ಪಡೆಯಬಹುದು ಅದನ್ನು ಪರಿಶೀಲಿಸುವುದಕ್ಕಾಗಿ ವಿಶೇಷ ಸಿಬ್ಬಂದಿಯನ್ನು ನೇಮಿಸಿದೆ. ಅಲ್ಲದೆ ಇನ್ನೂ ಏನೇನು ಮಾಡಿದರೆ ಅನುಕೂಲವಾಗುತ್ತದೆಂದು ತೋರುತ್ತದೋ ಅದನ್ನೆಲ್ಲಾ ಸರ್ಕಾರದವರು ಮಾಡಬೇಕೆಂದಿದ್ದಾರೆ. ಈ ಭರವಸೆಯ ಮೇಲೆ ಮಾನ್ಯಸೂಚಕರು ತಮ್ಮ ನಿರ್ಣಯವನ್ನು ವಾಪಸುಪಡೆಯಬಹುದು.

ಶ್ರೀ ಎಸ್. ಗೋಪಾಲಗೌಡ.—ಒಂದು comprehensive ಯೋಜನೆಯನ್ನು ಹಾಕಿಕೊಳ್ಳಬೇಕು.

Sri H. SIDDAVEERAPPA.—In fact a special officer has been appointed.

Sri S. GOPALA GOWDA.—I seek the leave of the House to withdraw my cut motion.

The cut motion was, by leave, withdrawn.

Supply of power for Irrigation in rural areas of Chitaldrug District.

ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ).—ಸ್ವಾಮಿ, ನನ್ನ ಖೋತಾ ಸೂಚನೆ ಈ ರೀತಿಯಿದೆ; ಅದನ್ನು ಮಂಡಿಸುತ್ತೇನೆ.

> "The demand under the head '81-A. Capital outlay on electricity schemes' for Rs 16,73,825 be reduced by Rs. 100 (to raise a discussion on the necessity of supplying electricity in rural areas for irrigation in Chitaldrug District)."

ಸ್ವಾಮಿ, ಈ ವಿಚಾರದಲ್ಲಿ ನಮ್ಮ ಜಿಲ್ಲೆಯ ಸದಸ್ಯರುಗಳು ಆಗಾಗ್ಗೆ ಹೇಳುತ್ತಲೇ ಇದ್ದಾರೆ. ಮಾನ್ಯಮಂತ್ರಿಗಳೂ ಈ ನಿರ್ಣಯದ ವಿಚಾರದಲ್ಲಿ ಒಂದಂಶವನ್ನು ಮನಗಂಡಿದ್ದಾರೆಂಬುದನ್ನು ತಿಳಿದು ನನಗೆ ಸಂತೋಷವಾಯಿತು. ಏನೆಂದರೆ: ನಮ್ಮ ಜಿಲ್ಲೆಯಲ್ಲಿ ನೀರಿನ ಮಟ್ಟ ಮೇಲೆಯೇ ಇದೆ. ಇದೊಂದು ದೈವದತ್ತವಾದ ಅನುಕೂಲವಿದೆಯೆಂಬುದು ಸರ್ಕಾರದವರ ಗಮನಕ್ಕೆ ಬಂತಲ್ಲಾ ಎಂದು ನನಗೆ ತುಂಬ ಮನಸ್ಸಿಗೆ ಸಮಾಧಾನವುಂಟಾಗಿದೆ. ಇದೊಂದೇ ಕಾರಣದಿಂದ ನಾನೀಗ ತಮ್ಮನ್ನು ವಿದ್ಯುಚ್ಛಕ್ತಿಯನ್ನೊದಗಿಸಬೇಕೆಂದು ಕೇಳುತ್ತಿಲ್ಲ. ಇನ್ನೂ ನಾನಾ ಕಾರಣಗಳಿಂದ ಅಲ್ಲಿಗೆ ವಿದ್ಯುಚ್ಛಕ್ತಿ ಸರಬರಾಯಿಮಾಡಲಿಕ್ಕೆ ಹೆಚ್ಚಿಗೆ ಪ್ರಾಮುಖ್ಯತೆಕೊಡಬೇಕೆಂದು ಹೇಳುತ್ತೇನೆ. ಒಂದೇನೆಂದರೆ, ಈ ನಮ್ಮಲ್ಲಿರತಕ್ಕ ಕೆರೆಗಳ ಸಂಖ್ಯೆ 250 ಮಾತ್ರ. ಬೇರೆ ಕಡೆಗಳಲ್ಲಾದರೋ 2,000–3,000 ಕೆರೆಗಳಿವೆ. ಆದ್ದರಿಂದ ಸರ್ಕಾರದವರು ನಮ್ಮ ಕಡೆಯಲ್ಲಿ ಕೆರೆಕಟ್ಟೆಗಳಿಗೆ ಹೆಚ್ಚಿನ ಹಣ ಖರ್ಚುಮಾಡಿಲ್ಲವೆಂಬುದು ಸ್ಪಷ್ಟವಾಗಿದೆ. ಸಾಮಾನ್ಯವಾಗಿ ಬೇರೆ ಕಡೆಗಳಲ್ಲಿ ಸರ್ಕಾರದವರು ಒಂದೊಂದು ಕೆರೆಗೆ 50 ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದೂ ಉಂಟು. ಇದರಂತೆ ನೋಡುವುದಾದರೆ ನಮ್ಮ ಜಿಲ್ಲೆಯಲ್ಲಿ ಕೇವಲ 4% ರಷ್ಟು ಮಾತ್ರ ಹಣವನ್ನು ತಾವು ಇದುವರೆಗೆ ಖರ್ಚುಮಾಡಿರುತ್ತೀರೆನ್ನಬಹುದು. ಬೇರೆ ಡಿಸ್ಟ್ರಿಕ್ಟುಗಳಿಗೆ ಎಷ್ಟೋ ಹೆಚ್ಚಿಗೆ ಕೊಟ್ಟಿರುತ್ತೀರಿ. ಅಂದಮಾತ್ರಕ್ಕೇ ಒಂದೇ ರೀತಿಯಲ್ಲಿ ಎಲ್ಲ ಕಡೆಗೂ ಕೊಡಬೇಕೆಂದು ನಾನು ಹೇಳುವುದಿಲ್ಲ. ಎಲ್ಲೆಲ್ಲಿ ಏನೇನು ಅವಶ್ಯಕತೆಗಳಿವೆಯೋ ಅದಕ್ಕನುಗುಣವಾಗಿ ಕೊಡಬೇಕಾದದ್ದೇನೋ ಸರಿ. ಕೋಲಾರ ಜಿಲ್ಲೆಯಲ್ಲಿ ಹೆಚ್ಚಿಗೆ ನೀರಿನ ವಸತಿಯಿರುವುದರಿಂದ ಹೆಚ್ಚಿಗೆ ಕೆರೆಗಳಿರಬೇಕಾದದ್ದು ನ್ಯಾಯವೇ.

ಇನ್ನೊಂದು ವಿಷಯವೇನೆಂದರೆ, ನಮ್ಮ ಜಿಲ್ಲೆಯಲ್ಲಿ ನೀರಾವರಿ ಯೋಜನೆಗಳನ್ನಾವುದನ್ನೂ ಹೆಚ್ಚಿಗೆ ಕೈಕೊಂಡಿಲ್ಲ. ಬೇರೆ ಜಿಲ್ಲೆಗಳಲ್ಲಾದರೋ 40 ಸಾವಿರ, 50 ಸಾವಿರ, 60 ಸಾವಿರ ರೂಪಾಯಿಗಳ ವೆಚ್ಚದಲ್ಲಿ ಅನೇಕ ಯೋಜನೆಗಳಿರುವುದು ಕಾಣಬರುತ್ತವೆ. ನಮ್ಮಲ್ಲಿರುವ ಕೆರೆಗಳೂ ಕೂಡ ಚಿಕ್ಕವು. ಆದ್ದರಿಂದ ನಮ್ಮ ಡಿಸ್ಟ್ರಿಕ್ಟಿಗೆ ಈ ರೀತಿಯಾದರೂ ಹೆಚ್ಚಿಗೆ ಹಣವನ್ನು ಖರ್ಚುಮಾಡುವುದು ಯುಕ್ತವೆಂದು ಹೇಳುತ್ತೇನೆ. ಅದರಲ್ಲೂ ನಮ್ಮ ತಾಲ್ಲೂಕಾದ ಹೊಳಲ್ಕೆರೆಯಲ್ಲಿ ಎಲೆಕ್ಟ್ರಿಸಿಟಿ ಪಂಪಿನ ಸೆಟ್ಟುಗಳಿರುವುದು ಎರಡು ಮಾತ್ರ. ಶ್ರೀ ದುಗ್ಗಪ್ಪನವರು ಹೇಳಿದಹಾಗೆ, ನಮ್ಮ ಕಡೆಯ ಭೂಮಿ ಗೊಬ್ಬರದಂಥ ಭೂಮಿ. ಅಲ್ಲಿಗೆ ಸರಿಯಾಗಿ ನೀರನ್ನೊದಗಿಸಿದರೆ ಬೇಕಾದಷ್ಟು ಪೈರನ್ನು ಮಾಡಿ ದೇಶಕ್ಕೆ ದವಸವನ್ನೊದಗಿಸಬಹುದು. ಒಂದು ತಂತಿ ಕಂಬ ಹಾಕಿಕೊಂಡರೆ 50–60 ಬಾವಿಗಳಿಗೆ ಹತ್ತಿರ ಹತ್ತಿರದಲ್ಲೇ ಪಂಪ್ ಹಾಕಿಕೊಳ್ಳುವುದಕ್ಕೆ ಅವಕಾಶವಿದೆ. ಪಾಳ್ಯ, ಉಡುಗೇರಿ ಮುಂತಾದ ಗ್ರಾಮಗಳಲ್ಲಿ 20–30 ಬಾವಿಗಳಿವೆ. ತಮಗೆ ಪಂಪ್ ಹಾಕಿಸಿಕೊಡಬೇಕೆಂದು ಅರ್ಜಿಗಳನ್ನು ಹಾಕಿ ಒಂದು ವರ್ಷದ ಮೇಲಾಗಿದೆ; ಇನ್ನೂ ಅಲ್ಲಿಗೆ ಕೊಟ್ಟಿಲ್ಲ. ನಿನ್ನೆ ದಿವಸವೂ ಅಲ್ಲಿನ ಜನರು ಬಂದು ತಮಗೆ ಅರ್ಜಿಕೊಟ್ಟು ಹೋಗಿದ್ದಾರೆ. ಇದೇ ರೀತಿ ತುಪ್ಪದಹಳ್ಳಿ, ಸುಂಗನಹಳ್ಳಿ, ಬೊಕ್ಕದಪುರ ಮುಂತಾದ ಪ್ರದೇಶಗಳಲ್ಲೂ ನೀರಿನಮಟ್ಟ ಮೇಲೆಯೇ ಇದೆ. ಬಹಳ ಸುಲಭವಾಗಿ ಅವರಿಗೆ ನೀರಿನ ಅನುಕೂಲ ಮಾಡಿಕೊಡಬಹುದು. ಆದ್ದರಿಂದ ಚಿತ್ರದುರ್ಗ ಜಿಲ್ಲೆಯಲ್ಲಿ ಕೊಡತಕ್ಕ ಎಲೆಕ್ಟ್ರಿಸಿಟಿ ಪಂಪನ್ನು ಮುಖ್ಯವಾಗಿ ಅಲ್ಲಿನ ಗ್ರಾಮಾಂತರ ಪ್ರದೇಶದಲ್ಲಿ ಯಥೇಚ್ಛವಾಗಿ ಕೊಟ್ಟು ವ್ಯವಸ್ಥಾಪೂರ್ವಕವಾಗಿ ಕೆಲಸಮಾಡಬೇಕೆಂದು ನಾನು ಮನವಿಮಾಡಿಕೊಳ್ಳುತ್ತೇನೆ.

Mr. SPEAKER.—Cut motion moved :

> "That the demand be reduced by Rs. 100."

*ಶ್ರೀ ಜೆ. ಮಹಮ್ಮದ್ ಇಮಾಂ (ಜಗಳೂರು).—ಒಂದೇ ಒಂದು ವಿಷಯ ನಾನು ಹೇಳಬೇಕಾಗಿದೆ. ಈ ಖೋತಾ ಸೂಚನೆಯನ್ನು ತಂದ ನನ್ನ ಪುಟ್ಟ ಸ್ನೇಹಿತರಾದ ಶ್ರೀ ಶಿವಪ್ಪನವರು ಬಹಳ ಚೆನ್ನಾಗಿ ವಿಷಯವನ್ನು ಸರ್ಕಾರದವರ ಮುಂದಿಟ್ಟಿದ್ದಾರೆ. ಅದರಮೇಲೆ ನಾನವರಿಗೆ ಬೆಂಬಲಕೊಡಬೇಕೆಂದು ಉತ್ಸಾಹಗೊಂಡು ತಮ್ಮ ಮುಂದೆ ಹೇಳನಿಂತಿದ್ದೇನೆ. ಅವರು ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಎಷ್ಟರಮಟ್ಟಿಗೆ ಪಂಪಿನ ಅವಶ್ಯಕತೆಯಿದೆಯೆಂದು ವಿವರಿಸಿದ್ದಾರೆ. ಆದ್ದರಿಂದ ನಾನೀಗ ತಿಳಿಸಬೇಕಾಗಿರುವುದು ಒಂದೇ ಒಂದು ವಿಷಯ.

ಈಗ ಸಾಮಾನ್ಯವಾಗಿ ಇಲಾಖೆಯವರು ಪಂಪುಗಳನ್ನು ಕೊಡುವುದರಲ್ಲಿ ಒಂದು 'ಕನಿಷ್ಠ ಮೊಬಲಗಿನಷ್ಟು return' ಬರುವಂತೆ ಇರಬೇಕೆಂದು ಹೇಳಿ ಶೇಕಡ 5ರಷ್ಟೋ 10ರಷ್ಟೋ ಬಂದರೇನೇ ಮಂಜೂರು ಮಾಡುತ್ತಾರೆ, ಇಲ್ಲದಿದ್ದರೆ ಆಗುವುದಿಲ್ಲವೆಂದು ಹೇಳಿಬಿಡುತ್ತಾರೆ. ಇದು ಸರಿಯಲ್ಲ. ಹಿಂದೆ ಒಂದಾನೊಂದು ಕಾಲದಲ್ಲಿ ಸರ್ಕಾರದ ನೀತಿಯೇನಿತ್ತೆಂದರೆ, ಸಾವಿರಕ್ಕೆ ಮೇಲ್ಪಟ್ಟು ಜನಸಂಖ್ಯೆಯಿರುವ ಪ್ರತಿಯೊಂದು ಹಳ್ಳಿಗೂ ವಿದ್ಯುಚ್ಛಕ್ತಿ ಕೊಟ್ಟೇ ಕೊಡಬೇಕೆಂದು ಮಾಡಿದ್ದರು. ಶ್ರೀ ಭಾಷ್ಯಂರವರು ಮಂತ್ರಿಗಳಾಗಿದ್ದಾಗ ಅವರೇ ಇದನ್ನು ಘೋಷಿಸಿದ್ದಾರೆ. ರೇಡಿಯೋ ಮೂಲಕ ಕೂಡ ಅವರು ತಿಳಿಸಿದ್ದು ಇನ್ನೂ ನಮಗೆ ಜ್ಞಾಪಕದಲ್ಲಿದೆ. ಈಗ ಅವರು ಹೇಳುವುದೇನೆಂದರೆ, ಚಿತ್ರದುರ್ಗ ಜಿಲ್ಲೆಗೆ ಹೆಚ್ಚಾಗಿ ಕೊಡಬೇಕು. ಹೀಗೆ ಕೊಡಬೇಕಾದರೆ return ನಿರೀಕ್ಷೆ ಮಾಡಬಾರದು. ಈಗ ಸದ್ಯದಲ್ಲಿ ಸಾಕಷ್ಟು ಪ್ರತಿಫಲವಿಲ್ಲದಿದ್ದರೂ ಕ್ರಮೇಣ ಇದರಿಂದ ಲಾಭಬರುತ್ತದೆ. ಪಲ್ಲಾಘಟ್ಟ, ಸೊಕ್ಕೆ ಗ್ರಾಮಗಳಲ್ಲಿ ಎರಡೂವರೆ ಸಾವಿರ

ಪ್ರಶ್ನಾ ಸಂಖ್ಯೆಯಿದೆ. ಅಲ್ಲದೆ ಅಂದಾಜು ತಯಾರಾಗಿದೆ. ಅದು ಸರ್ಕಾರಕ್ಕೆ ಮಂಜೂರಾತಿಗೆ ಹೋದರೆ, ಅದಿಲ್ಲ, ಇದಿಲ್ಲ, ಇದರಿಂದ ಸಾಕಷ್ಟು return ಬರುವುದಿಲ್ಲ, ಎಂದು ಹೇಳುತ್ತಾರೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು, return ಅಪೇಕ್ಷೆಮಾಡದೆ, ಅಲ್ಲಿ ವ್ಯವಸಾಯಕ್ಕೆ ಅನುಕೂಲವಾಗುತ್ತದೆ.ದು ಕಂಡುಬಂದರೆ ತಕ್ಷಣ ಮಂಜೂರು ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

(Sri V. MASIYAPPA rose.)

Mr. SPEAKER.—Sri V. Masiyappa, you could have taken advantage to speak when cut motion No. 37 came up. You were silent then. There is no time now to give you a chance as there are three more cut motions. Moreover, there is another demand on which you could speak.

ಶ್ರೀ ಎಚ್. ಸಿದ್ದವೀರಪ್ಪ.—ಸ್ವಾಮಿ, Return ವಿಚಾರದಲ್ಲಿ ಮಾನ್ಯ ಇಮಾಂರವರು ಪ್ರಶ್ನೆಯನ್ನೆತ್ತಿದ್ದರಿಂದ ಒಂದು ಮಾತು ಹೇಳಲೇಬೇಕಾಗಿದೆ. ವಿದ್ಯುಚ್ಛಕ್ತಿ ಸರಬರಾಯಿಯನ್ನು ಹಿಂದೂಸ್ಥಾನದಲ್ಲಿ ಇನ್ನೆಲ್ಲೂ ಇಲ್ಲದಿರುವಷ್ಟು ಕಡಮೆ ದರದಲ್ಲಿ ಮೈಸೂರು ದೇಶದಲ್ಲಿ ಮಾಡುತ್ತಿದ್ದಾರೆ. ಹೀಗಿದ್ದರೂ return ಬೇಡವೆಂದರೆ ಹೇಗೆ? ವಿದ್ಯುಚ್ಛಕ್ತಿ ಇಲಾಖೆಗೆ ಹಾಕಿದ ಹಣವನ್ನು ಬಡ್ಡಿ ಕೊಟ್ಟು ತರುತ್ತೇವೆಂಬುದನ್ನು ಜ್ಞಾಪಕದಲ್ಲಿಟ್ಟುಕೊಂಡರೆ, ಲಾಭವಂತೂ ಬೇಡ, ಕೊನೆಯ ಪಕ್ಷ self-sufficient ಆಗಿರಬೇಕೆಂಬುದನ್ನು ಸರ್ಕಾರದವರು ಯೋಚನೆ ಮಾಡಲೇಬೇಕಾಗಿದೆ. ಕೇಂದ್ರ ಸರ್ಕಾರದ ಮಂತ್ರಿಗಳು ಬಂದಾಗ ಅವರಿಗೆ ಇಲ್ಲಿನ ವಿದ್ಯುಚ್ಛಕ್ತಿ ಸರಬರಾಯಿ ದರವನ್ನು ಹೇಳಿದಾಗ ಅವರಿಗೇ ಆಶ್ಚರ್ಯವಾಯಿತು. ಇಂಡಿಯಾ ದೇಶದ ಬೇರೆ ಬೇರೆ ಕಡೆಗಳಲ್ಲಿ ವಿದ್ಯುಚ್ಛಕ್ತಿಗೆ ಎಷ್ಟು ಚಾರ್ಜು ಮಾಡುತ್ತಾರೆಂಬ ಬಗ್ಗೆ ವಿವರಗಳನ್ನು ಸಭೆಯ ಮುಂದಿಡುತ್ತೇನೆ; ಅವರೇ ನೋಡಲಿ. ಚಿತ್ರದುರ್ಗ ಜಿಲ್ಲೆಯ ವಿಚಾರ ತೆಗೆದುಕೊಂಡರೆ, 50 ಲಕ್ಷಗಳಲ್ಲಿ 11,77,000 ರೂಪಾಯಿಗಳನ್ನು ಅದೊಂದು ಜಿಲ್ಲೆಗೇ ಖರ್ಚುಮಾಡಿದ್ದೇವೆ. ಇದಕ್ಕೇ highest ಖರ್ಚುಮಾಡಿದ್ದೇವೆಂದರೆ ತಪ್ಪಾಗಲಾರದು. ಅಲ್ಲದೆ 70 ಅಂದಾಜುಗಳು 12 ಲಕ್ಷ ರೂಪಾಯಿಗಳಿಗೆ ತಯಾರಾಗಿದ್ದುವು. 70 ರಿಂದ 370 ಪಂಪುಗಳು ಸರ್ವಿಸ್ಸಿಗೆ ಬರುವ ನಿರೀಕ್ಷೆಯಿದೆ. ಆ ಜಿಲ್ಲೆಯಲ್ಲಿ 522 ವಿದ್ಯುಚ್ಛಕ್ತಿ ಪಂಪುಗಳಿವೆ. ಒಟ್ಟಿನಲ್ಲಿ ಚಿತ್ರದುರ್ಗ ಜಿಲ್ಲೆಗೇ ಹೆಚ್ಚು ಉಪಕಾರವಾಗಿದೆಯೆಂದರೆ ತಪ್ಪಾಗಲಾರದು.

ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಈ ಖೋತಾ ಸೂಚನೆಯಿರುವುದು ಹೊಳಲ್ಕೆರೆ ವಿಷಯದಲ್ಲಿ.

ಶ್ರೀ ಎಚ್. ಸಿದ್ದವೀರಪ್ಪ.—ಈ ಜಿಲ್ಲೆಗೇ ಹೆಚ್ಚಾಗಿ ಗಮನಕೊಟ್ಟು ಕೆಲಸಮಾಡುತ್ತಿದ್ದಾರೆ. ಶ್ರೀ ಶಿವಪ್ಪನವರು ಹೇಳಿರುವ ಅಂಶವನ್ನೂ ಜ್ಞಾಪಕದಲ್ಲಿಟ್ಟುಕೊಳ್ಳೋಣ; ಎಲ್ಲಿ ಸಾಧ್ಯವೋ ಅಲ್ಲಿ ಸಾಧ್ಯವಾದಷ್ಟನ್ನೂ ಮಾಡುತ್ತೇವೆ.

Sri G. SIVAPPA.—I seek leave to withdraw my cut motion.

The cut motion was, by leave, withdrawn.

Mr. SPEAKER.—The question is:

"That a supplementary sum not exceeding Rs. 16,73,825 be granted to the Government to defray the charges which will come in course of payment during the year ending 31st day of March 1954, in respect of 'Capital Outlay on Electricity Schemes'."

The motion was adopted.

DEMAND No. 45—ADVANCES AND LOANS

R. Loans and Advances by the State Government.

Mr. SPEAKER.—There is the last Demand—Demand No. 45.

Motion moved:

"That a supplementary sum not exceeding Rs. 5,00,000 be granted to the Government to defray the charges which will come in course of payment during the year ending 31st day of March 1954, in respect of 'Loans and Advances by the State Government'."

Supply of pumps and other accessories on hire-purchase system to applicants for lift irrigation purposes.

Sri MULKA GOVINDA REDDY (Chitaldrug).—Sir, I beg to move:

"That the demand under the head 'R. Loans and Advances by the State Government' for Rs. 5,00,000 be reduced by Rs. 100 (to urge the Government to immediately supply on hire-purchase system motors and other accessories to the applicants for power supply for lift irrigation purposes)."

ಸ್ವಾಮಿ, ಈ ವಿಷಯದಲ್ಲಿ ವಿದ್ಯುಚ್ಛಕ್ತಿ ಮಂತ್ರಿಗಳು ಮಾತನಾಡುತ್ತಾ, ಈ ಸಂಬಂಧದಲ್ಲಿ ಒಂದು ಯೋಜನೆಯನ್ನು ತಯಾರು ಮಾಡುತ್ತಿದ್ದೇವೆಂದು ಹೇಳಿದರು; ಇದು ಸಂತೋಷದ ವಿಷಯ. ಸರ್ಕಾರದವರು 1952-53 ಮತ್ತು 1953-54ರಲ್ಲಿಯೂ ಅನೇಕ ಕಡೆಗಳಿಗೆ ವಿದ್ಯುಚ್ಛಕ್ತಿಯನ್ನು ಮಂಜೂರು ಮಾಡಿದ್ದಾರೆ. ರೈತರಲ್ಲಿ ಹಣದ ಅಭಾವದಿಂದ ಸರ್ಕಾರದವರು ಕಲ್ಪಿಸಿರುವ ಸೌಲಭ್ಯವನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲವೆಂದು ಹೇಳಬೇಕಾಗಿದೆ. ಅನೇಕ ಹಳ್ಳಿಗಳಿಗೆ ಮಂಜೂರು ಮಾಡಿದ್ದರೂ ಅಲ್ಲಿನ ಜನರು ಮೋಟಾರುಗಳನ್ನು

(Sri MULKA GOVINDA REDDY.)

ತರಿಸಿಕೊಳ್ಳುವುದಕ್ಕೂ ಪಂಪ್‌ಹೌಸ್‌ಗಳನ್ನು ಕಟ್ಟುವುದಕ್ಕೂ ಶಕ್ತಿಯಿಲ್ಲದೆ ಸುಮ್ಮನಿದ್ದಾರೆ. ಹಿಂದೆ 30 ರೂಪಾಯಿ ಅಡ್ವಾನ್ಸ್ ಕೊಟ್ಟಿದ್ದರೂ ಸಾಕೆಂದು ಈ ಸೌಲಭ್ಯವನ್ನು ಕೊಡುತ್ತಿದ್ದರು. ರೈತರು ಲಿಫ್ಟ್ ಇರಿಗೇಷನ್ ಪಂಪುಗಳನ್ನು ತೆಗೆದುಕೊಂಡರೆ ಕಂತುಗಳಮೇಲೆ ಮೋಟಾರುಗಳನ್ನು ಕೊಡುವುದಕ್ಕೆ ಏರ್ಪಾಡು ಮಾಡಿದ್ದರು. ಫುಡ್ ಕಮಿಷನರಿಗೆ ಈ ಅಧಿಕಾರವನ್ನು ಕೊಟ್ಟಿದ್ದರಿಂದ ಸಾವಕಾಶವಾಯಿತೆಂದು ಅದನ್ನು ತಪ್ಪಿಸಿ ವಿದ್ಯುಚ್ಛಕ್ತಿ ಇಲಾಖೆಗೆ ಕೊಟ್ಟರು. ಆದರೂ ಈ ದಿವಸದವರೆವಿಗೂ ಜಾರಿಗೆ ಬಂದಿಲ್ಲದಿರಲು ಕಾರಣವೇ ಗೊತ್ತಿಲ್ಲ. ಅಂತೂ ಈ ಯೋಜನೆ ಬಹಳ ಒಳ್ಳೆಯದು, ಇದರಿಂದ ರೈತರಿಗೆ ಹೆಚ್ಚು ಅನುಕೂಲವಾಗುತ್ತದೆ.

ಇನ್ನೊಂದು ವಿಷಯ, ವಿದ್ಯುಚ್ಛಕ್ತಿ ಇಲಾಖೆಯವರು ಕಿರ್ಲೋಸ್ಕರ್ ಕಂಪೆನಿಯ ಮೋಟಾರುಗಳನ್ನೂ, ಪಂಪುಗಳನ್ನೂ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತಿರುವುದು ಸೂಕ್ತವಲ್ಲ. ಅವು ಚೆನ್ನಾಗಿದ್ದರೆ ತೆಗೆದುಕೊಳ್ಳಲಿ, ಯಾವುದು ರೈತರಿಗೆ ಅನುಕೂಲವೋ ಅದನ್ನು ತೆಗೆದುಕೊಳ್ಳುವಂತೆ ಮಾಡಬೇಕು. ರೈತರಿಗೆ ಹಣ ಒದಗಿಲ್ಲ. ಅವರು ಸ್ವತಃ ಕೊಳ್ಳುವುದಕ್ಕೆ ಚೈತನ್ಯವಿಲ್ಲದಿರುವುದರಿಂದ ಇಲಾಖೆಯವರೇ ತರಿಸಿಕೊಟ್ಟು ಈ ಯೋಜನೆಯನ್ನು ಆದಷ್ಟು ಜಾಗ್ರತೆ ಜಾರಿಗೆ ತಂದರೆ ಅನುಕೂಲವೆಂದು ಹೇಳಿ ಈ ಖೋತಾ ನಿರ್ಣಯವನು ಸಭೆಯಮುಂದಿಟ್ಟಿದ್ದೇನೆ.

Mr. SPEAKER.—Cut motion moved:

"That the demand be reduced by Rs. 100."

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು).—ಸ್ವಾಮಿ, ಕಿರ್ಲೋಸ್ಕರ್ ಕಂಪೆನಿಯಿಂದಲೇ ತೆಗೆದುಕೊಳ್ಳಬೇಕೆಂದು ಹೇಳುತ್ತಾರೆಂದು ಮಾನ್ಯ ಸದಸ್ಯರು ಹೇಳಿದರು. ಇಂಥ ಕಂಪೆನಿಯಿಂದಲೇ ತೆಗೆದುಕೊಳ್ಳಬೇಕೆಂಬ ಅಭಿಪ್ರಾಯ ಸರ್ಕಾರಕ್ಕಿಲ್ಲ. ಟೆಂಡರ್ ಕರೆಯುತ್ತೇವೆ. ನನ್ನ ಉದ್ದೇಶವಿಷ್ಟೆ : ಒಂದೇ ಕಂಪೆನಿಯಿಂದ ತೆಗೆದುಕೊಳ್ಳುವುದರಲ್ಲಿ ಒಂದು ಅನುಕೂಲವಿದೆ. Service ಮಾಡಿಸಿಕೊಳ್ಳಬೇಕಾದರೆ ಅನುಕೂಲ. ಒಂದೇ ಕಂಪನಿಯಿಂದ 500 ಪಂಪುಗಳನ್ನು ತೆಗೆದುಕೊಂಡರೆ, ನಾವು free service ಕೊಡಿ ಎಂದು ಅವರನ್ನು ಕೇಳಬಹುದು. ಆದರೂ ಮಾನ್ಯ ಸದಸ್ಯರು ಹೇಳಿದುದನ್ನೂ ಆಲೋಚನೆ ಮಾಡೋಣ. ಒಂದು ಊರಿನಲ್ಲಿ ನಾಲ್ಕು ಪಂಪುಗಳನ್ನು ಹಾಕಿದರೆ. ಅವಕ್ಕೆ ಬೇಕಾಗುವ ಸ್ಪೇರ್ ಪಾರ್ಟ್ಸ್‌ಗೆ ಕಷ್ಟಬರಬಹುದು, ಈ ವಿಚಾರವನ್ನೆಲ್ಲಾ ಯೋಚನೆಮಾಡುವುದು ಒಳ್ಳೆಯದು ಅಲ್ಲದೆ ಇಂಡಿಯಾ ಸರ್ಕಾರದವರು ನಮಗೆ ತಿಳಿಸಿದ್ದಾರೆ, ಆದಷ್ಟುಮಟ್ಟಿಗೂ ನಮ್ಮ ಸ್ವದೇಶಿ ಕಂಪೆನಿಗಳಲ್ಲಿ ತಯಾರು ಮಾಡುವ ಸಾಮಾನುಗಳಿಗೇ ಉತ್ತೇಜನಕೊಡಬೇಕೆಂದು. ನಮ್ಮ ರಾಷ್ಟ್ರದ ಕೈಗಾರಿಕೆಗಳಿಗೆ ಉತ್ತೇಜನ ಕೊಡಬೇಕೆಂಬುದು ಇದರ ಉದ್ದೇಶ.

ತಮಗೇ ತಿಳಿದಿರುವ ಹಾಗೆ, ಪಂಪುಗಳನ್ನೂ ಸ್ಟಾರ್ಟರುಗಳನ್ನೂ ಹೈರ್‌ಪರ್‌ಚೇಸ್ ಪದ್ಧತಿಯ ಮೇಲೆ ಕೊಡುತ್ತಿದ್ದೇವೆ ; ಈ ಪದ್ಧತಿ ಈಗಲೂ ಜಾರಿಯಲ್ಲಿದೆ. ಆದರೂ ಎಷ್ಟುಬೇಕೋ ಅಷ್ಟನ್ನೂ ಪೂರೈಸುವುದರಲ್ಲಿ ನಮ್ಮ ಉದ್ದೇಶ ಪೂರ್ಣವಾಗಿ ಸಫಲವಾಗಿಲ್ಲವೆಂದು ಒಪ್ಪಿಕೊಳ್ಳುತ್ತೇನೆ. ಆದುದರಿಂದಲೇ ಒಂದು ಯೋಜನೆ ಮಾಡಬೇಕೆಂದಿರುವುದು. ಷೆಡ್‌ಗಳನ್ನು ಕಟ್ಟಲು ಎಷ್ಟು ಆಗಬಹುದೆಂಬ ಬಗ್ಗೆ ಟೆಂಡರುಗಳನ್ನು ಕರೆದಿದ್ದೇವೆ. ಅನೇಕ ಸಂದರ್ಭಗಳಲ್ಲಿ ತಗಡು, ಸಿಮೆಂಟು ಇವುಗಳನ್ನು ತೆಗೆದುಕೊಳ್ಳಲು ತೊಂದರೆಯಾಗುತ್ತದೆ. ಅದಕ್ಕಾಗಿ ಟೆಂಡರುಗಳನ್ನು ಕರೆದಿದ್ದೇವೆ. ಆದಷ್ಟು ಜಾಗ್ರತೆ ಮಾಡುತ್ತೇವೆ.

Sri MULKA GOVINDA REDDY.—I seek leave to withdraw my cut motion.

The cut motion was, by leave, withdrawn.

Mr. SPEAKER.—The question is :

"That a supplementary sum not exceeding Rs. 5,00,000 be granted to the Government to defray the charges which will come in course of payment during the year ending 31st day of March 1954, in respect of 'Loans and Advances by the State Government'."

The motion was adopted.

Mr. SPEAKER.—The Appropriation Bill and other Bills including the Bills that were introduced today will be taken up tomorrow.

The House will now rise for the day to meet tomorrow at 8-30 A.M.

The House adjourned for the day at Five of the Clock to meet again on Saturday the 18th July 1953 at Thirty Minutes past Eight of the Clock.

WD 4516—GPB—600—10-2-54